2. ವಿತ್ತೀಯ ಕಾರ್ಯಕಲಾಪ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ ಶ್ರೀ ವಿ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ದೀರ್ಘವಾಗಿ ಏನು ಚರ್ಚೆ ನಡೆಯಿತು ಅದಕ್ಕೆ ಸಮರ್ಪಕವಾದಂತಹ ಉತ್ತರ ಹೇಳಬೇಕಾದದು ಸರ್ಕಾರದ ಕರ್ತವ್ಯ. ಅಷ್ಟೇ ಅಲ್ಲ ಅದು ಸರ್ಕಾರದ ಜವಾಬ್ದಾರಿ ಕೂಡ ಆಗಿದೆ. ಸಂಸದೀಯ ಪ್ರಕ್ರಿಯೆಗಳು ಮತ್ತು ಆಡಳಿತದ ಪಕ್ರಿಯೆಗಳನ್ನು ನಮ್ಮ ಆಂತರಿಕ ರಾಜಕೀಯಕೋಸ್ಕರ ಸ್ಥಗಿತಗೊಳಿಸುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಕುಡಿಯುವ ನೀರಿನ ತೊಂದರೆ ಬಹಳಷ್ಟು ಇದೆ. ಕುಡಿಯುವ ನೀರಿನ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಏನೇನು ಮಾಡಬೇಕೋ ಅದನ್ನೆಲ್ಲ ಮಾಡಲೇಬೇಕಾಗುತ್ತದೆ. ಇದಕ್ಕೆ ಯಾವ ನೀತಿ ಸಂಹಿತೆ ಅಡ್ಡ ಬರುವುದಿಲ್ಲ. ಮತ್ತೆ ಆ ಕರ್ತವ್ಯಗಳನ್ನು ನಾವು ಬಹಿರಂಗವಾಗಿಯೇ ಮಾಡಬೇಕಾಗುತ್ತದೆ. ಉದಾಹರಣೆಗೆ ಈಗ ಚುನಾವಣೆಗಳನ್ನು ಘೋಷಣೆ ಮಾಡಿದ್ದಾರೆ. ಆದರೂ ಕೂಡ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ 5 ವರ್ಷಗಳ ನಂತರ ಆ ಹಳೆಯ ಸಮಿತಿಗಳು ಇರಕೂಡದು ಎಂದು ಹೇಳಿ ಸ್ಪಷ್ಟವಾದಂತಹ ಕಾನೂನು ಇದೆ. ಈಗ ಹೊಸ ಚುನಾವಣೆ. ಯಾಗಿ ಹೊಸ ಸಮಿತಿಗಳು ರಚನೆಯಾಗುವುದಕ್ಕಿಂತ ಮುಂಚೆ 5-6 ವಾರಗಳ ಕಾಲ ನಾವು ಆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳನ್ನು ಕಾನೂನಿನ ಪ್ರಕಾರ ನಡೆಸುವುದಕ್ಕೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲೇಬೇಕಾಗುತ್ತದೆ. ಅದನ್ನು ನಾವು ನಿನ್ನೆ ಮಾಡಿದ್ದೇವೆ. ಅದನ್ನು ನಾವು ಮುಚ್ಚಿಡುವುದಕ್ಕೆ ಆಗುವುದಲ್ಲಿ ಪ್ರಕಟಿಸಬೇಕಾಗುತ್ತದೆ. ಈ ಸಭೆಯ ಮೂಲಕ ಇಡೀ ಕರ್ನಾಟಕ ರಾಜ್ಯಕ್ಕೆ ಅದನ್ನು ನಾವು ತಿಳಿಸಬೇಕಾಗುತ್ತದೆ. ಇದು ಅನಿವಾರ್ಯವಾದಂತಹ ಎಷ್ಟೋ ಕೆಲಸಗಳನ್ನು ಮಾಡಿದಾಗ ನೀತಿ ಸಂಹಿತೆಗೆ ನಾವು ಧಿಕ್ಕಾರ ಮಾಡಿದಂತೆ ಆಗುವುದಿಲ್ಲ. ಈ ದೇಶದ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಇದು ಸ್ಪಷ್ಟವಾದ ಅನುಭವ. ಈಗ ಚುನಾವಣೆಗಳು ನಡೆಯುತ್ತವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾವೆಲ್ಲರೂ ಈ ಚುನಾವಣೆಗಳನ್ನು ನಡೆಸಲೇಬೇಕು ಎಂದು ಹೇಳಿ ಒಂದು ನಿರ್ಧಾರಕ್ಕೆ ಬಂದು ಈ ಕೆಲಸ ನಡೆಯುತ್ತಿದೆ. ಇದಕ್ಕೋಸ್ಕರ ಬೇರೆ ಬೇರೆ ಪಕ್ಷದ ಮುಖಂಡರು ಅವರದ್ದೇ ಅದಂತಹ ಇತಿಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂಥ ಸಹಕಾರ ಎಷ್ಟೇ ಇರಲಿ ಅದಕ್ಕೆ ನಾನು ಸರ್ಕಾರದ ವತಿಯಿಂದ ಧನ್ಯವಾದಗಳನ್ನು ಕೊಡಬೇಕಾಗುತ್ತದೆ. ತಮಗೆ ಗೊತ್ತಿರುವಂತೆ ಈ ಚುನಾವಣೆಗಳನ್ನು ನಡೆಸುವಂತಹ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಿಕೊಟ್ಟಿರತಕ್ಕಂಥಾದ್ದು. ಅವರು ಇದರ ಬಗ್ಗೆ ವೇಳಾ ಪಟ್ಟಿಯನ್ನು ಕೊಟ್ಟನಂತರ ಈ ಸರ್ಕಾರ ಆ ಚುನಾವಣಾ ಆಯೋಗಕ್ಕೆ ಸಂಪೂರ್ಣವಾದ ಸಹಕಾರ ಕೊಡುತ್ತದೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತೇನೆ. ಇದು ಒಂದು ಹೆಮ್ಮೆ ಪಡುವಂತಹ ಪರಿಸ್ಥಿತಿ ಇದೆ. ಏಕೆಂದರೆ ಚುನಾವಣೆಗಳನ್ನು ಕರ್ನಾಟಕ ರಾಜ್ಯದಲ್ಲಿ ಯಾರೂ ತಡೆಗಟ್ಟಲಿಕ್ಕೆ ಆಗಲಿಲ್ಲ ಆಂಧ್ರಪ್ರದೇಶದಲ್ಲಿ ನೋಡಿ ಏನಾಗುತ್ತಿದೆ ಎಂದು ಅವರು ಒಂದು ರಾಜ್ಯಾಂಗದ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿ ಚುನಾವಣೆಗಳನ್ನು ಮುಂದಕ್ಕೆ ಹಾಕಿದಾಗ ಅಲ್ಲಿರತಕ್ಕಂಥ ಹೈಕೋರ್ಟ್ ಅವರಿಗೆ ಒಂದು ಆದೇಶ ಕೊಟ್ಟುಮೇ ಮತ್ತು ಜೂನ್ ತಿಂಗಳಲ್ಲಿ ಚುನಾವಣೆಗಳನ್ನು ಮಾಡಲೇಬೇಕು ಎಂದು ಹೇಳಿ ಆದೇಶ ಹೊರಡಿಸಿದೆ. ಆದರೆ ಕರ್ನಾಟಕ

ರಾಜ್ಯದಲ್ಲಿ ಅಂಥದ್ದಕ್ಕೆ ಅವಕಾಶ ಆಗಲಿಲ್ಲ. ನಾನು ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. 87ನೇ ಕಾನ್ಸಿಟ್ಯೂಶನಲ್ ಅಮೆಂಡ್‌ಮೆಂಟ್ ಪಾರ್ಲಿಮೆಂಟಿನ ಮುಂದಿದೆ. ಅದಕ್ಕೆ ನಾವೆಲ್ಲರೂ ಪಕ್ಷಾತೀತವಾಗಿ ವಿರೋಧ ಮಾಡಬೇಕಾಗುತ್ತದೆ. ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದುರ್ದೈವದಿಂದ ಅವರು ಈಗ ವಾಕ್ ಔಟ್ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರ ಮೂಲಕ ನಾನು ಅಪೀಲ್ ಮಾಡಿ ಕೊಳ್ಳುತ್ತೇನೆ. ಈ 87ನೇ ಅಮೆಂಡ್‌ಮೆಂಟ್ ಏನು ಪಾರ್ಲಿಮೆಂಟ್‌ನಲ್ಲಿ ಇದೆ, ಅದು ಆಂಧ್ರ ಪ್ರದೇಶದ ಸರಕಾರದ ಪ್ರಭಾವದಿಂದ ಬಂದಿದೆ. ಅದಕ್ಕೆ ನಾವು ವಿರೋಧವನ್ನು ಮಾಡದೇ ಹೋದರೆ, 73ನೇ ಕಾನ್ಸಿಟ್ಯೂಶನಲ್ ಅಮೆಂಡ್‌ಮೆಂಟ್ ಏನು ತಂದಿದ್ದರು ಅದರ ಬೇಸಿಕ್ ಸ್ಟ್ರಕ್ಚರ್‌ಗೆ ನಾವು ಭಾರಿ ಅಪಾಯವನ್ನು ಮಾಡಿದ ಹಾಗೆ ಆಗುತ್ತದೆ. ಇದು ಅಲ್ಲಿ ಪಾಸ್ ಆಗುವುದಿಲ್ಲ ಎಂದು ನಾನು ನಂಬಿದ್ದೇನೆ. ಏನಾದರೂ ಪಾಸ್ ಆದರೆ, ಅದರ ಪ್ರಕಾರ ಕಾನ್ಸ್ಟಿಟ್ಯೂಶನ್ ಅಮೆಂಡ್ ಆದರೆ, ಪ್ರತಿಯೊಂದು ರಾಜ್ಯದಲ್ಲಿ ಒಂದೇ ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಬರುವುದಕ್ಕೆ ಸಾಧ್ಯವಿದೆ. ಅಂದರೆ, ಗ್ರಾಮ ಮಟ್ಟದಲ್ಲಿ ಪಂಚಾಯತ್ ಚುನಾವಣೆಗಳನ್ನು ಮಾಡಿ, ತಾಲ್ಲೂಕು ಮಟ್ಟದಲ್ಲಿ ಚುನಾವಣೆಗಳನ್ನು ಸಂಪೂರ್ಣವಾಗಿ ಕೈಬಿಡುವುದಕ್ಕೆ ಒಂದು ರಾಜ್ಯಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆಂಧ್ರದಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ನಾನು ಇಲ್ಲಿ ವಿಶ್ಲೇಷಣೆ ಮಾಡಲು ಹೋಗುವುದಿಲ್ಲ. ಆ ಪರಿಸ್ಥಿತಿಗೆ ಅನುಗುಣವಾಗಿ ಬೇಸಿಕ್ ಸ್ಟ್ರಕ್ಚರ್ ಏನಿದೆ ಆ ಪ್ರಕಾರ ಮೂರು ಹಂತಗಳಲ್ಲಿ ಚುನಾವಣೆಗಳು ನಡೆಯಬೇಕು. ಈ ಬೇಸಿಕ್ ಸ್ಟ್ರಕ್ಚರ್‌ನ್ನು ಶ್ರೀ ರಾಜೀವ್ ಗಾಂಧಿಯವರು ತಮ್ಮ ಕಾಲದಲ್ಲಿ 73ನೇ ಅಮೆಂಡ್‌ಮೆಂಟ್ ಮಾಡುವ ಮೂಲಕ ಕೊಡುಗೆ ಕೊಟ್ಟು ಹೋದರು. ಅದನ್ನು ನಾವು ಅಷ್ಟು ಸುಲಭವಾಗಿ ಈಗ ತಿದ್ದುಪಡಿಯನ್ನು ಮಾಡಬಾರದು. ಈ ಸಭೆಯ ಮೂಲಕ ನಾನು ಬೇರೆ ಪಕ್ಷಗಳಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಈ 87ನೇ ಮೆಂಡ್‌ಮೆಂಟ್ ಏನಿದೆ, ಇದರ ಬಗ್ಗೆ ಸಾಕಷ್ಟು ಚರ್ಚೆಯಾದ ನಂತರ ತಿದ್ದುಪಡಿ ಮಾಡಲು ಅವಕಾಶ ಇರಬೇಕು. ಅದಕ್ಕೆ ಮುಂಚೆ ಈ ಅಮೆಂಡ್‌ಮೆಂಟ್‌ನ್ನು ಮಾಡಿದರೆ ಅನಾಹುತವಾಗುತ್ತದೆ ಎಂದು ಹೇಳಬಯಸುತ್ತೇನೆ. ಶ್ರೀ ರಾಜೀವ್ ಗಾಂಧಿಯವರ ಕಾಲದಲ್ಲಿ 73ನೇ ಅಮೆಂಡ್‌ಮೆಂಟ್ ಮಾಡುವಾಗ ಮೂರು ವರ್ಷಗಳ ಕಾಲ ಇಡೀ ದೇಶದಲ್ಲಿ ಇದರ ಬಗ್ಗೆ ಚರ್ಚೆ ನಡೆಯಿತು. ಹಾಗೆ ಚರ್ಚೆಯಾದ ನಂತರ 73ನೇ ಅಮೆಂಡ್‌ಮೆಂಟ್ ಪಾಸ್ ಆಯಿತು. ಈಗ ಅದಕ್ಕೆ ಸಂಪೂರ್ಣವಾಗಿ ತದ್ವಿರುದ್ಧವಾದ ಅಮೆಂಡ್‌ಮೆಂಟ್ ಪಾರ್ಲಿಮೆಂಟ್‌ನ ಮುಂದೆ ಏನಿದೆ, ಅದರ ಬಗ್ಗೆ ನಾವು ಗಂಭೀರವಾಗಿ ಚರ್ಚೆ ಮಾಡಿ ಅನಂತರ ದೇಶವು ಅದರ ಬಗ್ಗೆ ತೀರ್ಮಾನ ಮಾಡಬೇಕೇ ಹೊರತು, ಅದು ಅವಸರದಲ್ಲಿ ಪಾಸ್ ಮಾಡುವಂಥ ಅಮೆಂಡ್‌ಮೆಂಟ್ ಅಲ್ಲ. ಅದಕ್ಕೋಸ್ಕರ ನಮ್ಮ ಪಕ್ಷದ ನೀತಿ ಏನೆಂದರೆ don't tamper with the constitution. ಕಾನ್ಸ್ಟಿಟ್ಯೂಶನ್‌ನಲ್ಲಿ ಇರತಕ್ಕಂಥ ವಿಷಯಗಳನ್ನು ಬದಲಿ ಮಾಡುವುದಾದರೆ, ಅವಸರದಲ್ಲಿ ಮಾಡುವುದಲ್ಲ. ಪಂಚಾಯತ್ ರಾಜ್ ದೃಷ್ಟಿಯಿಂದ ಹೇಳಬೇಕಾದರೆ, 87ನೇ ಅಮೆಂಡ್‌ಮೆಂಟ್‌ನ್ನು ನಾವು ಏನಾದರೂ ನಿರ್ಲಕ್ಷ್ಯ ಮಾಡಿ ಪಾಸ್ ಮಾಡಿ ಈ ದೇಶದಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯೇನಿದೆ ಅದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಪೆಟ್ಟು ಬೀಳುತ್ತದೆ; ಕೊಡಲಿ ಪೆಟ್ಟು ಆಗುತ್ತದೆ ಎಂದು ಹೇಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಇವೊತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪಂಚಾಯತ್ ರಾಜ್ ವ್ಯವಸ್ಥೆ ಬಗೆಗಿನ ಕೆಲವು ಟೀಕೆಗಳ ಬಗ್ಗೆ ನಾನು ಇಲ್ಲಿ ಉತ್ತರಗಳನ್ನು ಹೇಳಬೇಕಾಗುತ್ತದೆ. ಕೆಲವರು ರಚನಾತ್ಮಕವಾದಂಥ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಉದಾಹರಣೆಗಾಗಿ ಹೊಸದಾಗಿ ಆರಿಸಿ ಬಂದಂಥ ಸದಸ್ಯರಿಗೆ ಟ್ರೈನಿಂಗ್ ಕೊಡಬೇಕೆಂದು ಹೇಳಿದ್ದಾರೆ. ಅಂಥವರಿಗೆ ಸಾಕಷ್ಟು ಟ್ರೈನಿಂಗ್ ಅವಕಾಶ ಇರಬೇಕು. ಇದನ್ನು ರಚನಾತ್ಮಕವಾಗಿ ಎಲ್ಲರೂ ಒಪ್ಪುತ್ತಾರೆ.

ಅದರ ಬಗ್ಗೆ 200 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿ, ಹೊಸದಾಗಿ ಆಯ್ಕೆಯಾಗಿ ಬಂದವರಿಗೆ ತಾಲ್ಲೂಕು ಮಟ್ಟದಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಟ್ರೈನಿಂಗ್ ಕೊಡಬೇಕು ಎಂಬ ಕುರಿತು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಹಾಗೆ ಮಾಡುವಾಗ ಸೆಟಿಲೈಟ್‌ನ್ನು ಉಪಯೋಗಿಸಿ, ಮೈಸೂರಿನಲ್ಲಿ ನಮ್ಮ ಸ್ಟೇಟ್ ಸಂಸ್ಥೆ ಏನಿದೆ, ಅದಕ್ಕೆ ಮತ್ತು ತಾಲ್ಲೂಕು ಮಟ್ಟಕ್ಕೆ ಒಂದು ಟೆಲಿವಿಷನ್ ಕನೆಕ್ಷನ್ ಕೊಟ್ಟು ಕ್ಲೊಶ್ಚನ್-ಆನ್‌ಸರ್ಸ್ ಮಾಡುವಂಥ ಒಂದು ವ್ಯವಸ್ಥೆಯನ್ನು ಕೂಡ ನಾವು ಮಾಡುತ್ತಾ ಇದ್ದೇವೆ. ಈ ತರಬೇತು ವ್ಯವಸ್ಥೆಯಲ್ಲಿ ಪಕ್ಷಾತೀತವಾಗಿ ಎಲ್ಲರೂ ಉತ್ಸಾಹದಿಂದ ಭಾಗವಹಿಸಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ರಾಜ್ಯದ ಗ್ರಾಮ ಮಟ್ಟದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂಬ ದೂರು ಮಾಡಿದ್ದಾರೆ. ಈ ದೂರನ್ನು ಸದನದ ಎರಡೂ ಕಡೆಗಳಿಂದ ನಾವು ಕೇಳುತ್ತಿದ್ದೇವೆ. ಈ ಗ್ರಾಮಪಂಚಾಯಿತಿಗಳ ಸಕ್ರೆಟರಿಗಳು ಏನಿದ್ದಾರೆ, ಈಗ ಅವರ ಮೇಲೆ ಯಾವುದೇ ನಿಯಂತ್ರಣವಿಲ್ಲ. ಇದಕ್ಕೋಸ್ಕರವಾಗಿ ನಾವು ಆಳವಾಗಿ ಚಿಂತನೆ ಮಾಡಿ, ಪಂಚಾಯತ್ ಮಟ್ಟದಲ್ಲಿ ಒಂದು ಜಮಾಬಂದಿ ತರಹ ಏಕೆ ಮಾಡಬಾರದು ಎಂದು ಚಿಂತನೆ ಮಾಡಿದ್ದೇವೆ. ಜಮಾ ಬಂದಿ ಅಂದರೆ ಬಹಿರಂಗವಾಗಿ ಅಕೌಂಟ್ಸ್‌ನ್ನು ನೋಡುವುದು. ಜಮಾಬಂದಿ ವ್ಯವಸ್ಥೆ ಮಾಡಿದಾಗ ಅಲ್ಲಿರತಕ್ಕಂಥ ಜನರು ಅದರಲ್ಲಿ ಪಾಲ್ಗೊಳ್ಳಬಹುದು. ಅದಕ್ಕೆ ಸಂಬಂಧಪಟ್ಟ ಜವಾಬ್ದಾರಿ ಅಧಿಕಾರಸ್ಥರನ್ನು ಉಪಸ್ಥಿತರಿರುವಂತೆ ಮಾಡಿ ಜಮಾಬಂದಿಯನ್ನು ಅವರ ಕಡೆಯಿಂದ ಮಾಡಿಸುತ್ತೇವೆ. ಅಂದರೆ ಪಬ್ಲಿಕ್ ಇನ್ಸ್‌ಪೆಕ್ಷನ್ ಆಫ್ ಅಕೌಂಟ್ಸ್ ಮಾಡುವಾಗ ಜನರು ಅದರಲ್ಲಿ ಪಾಲ್ಗೊಳಲು ಅವಕಾಶವಿದ್ದರೆ, ಈ ಭ್ರಷ್ಟಾಚಾರವು ಬಹಳ ಮಟ್ಟಿಗೆ ಕಡಿಮೆಯಾಗಬಹುದು ಎಂಬುದು ನಮ್ಮ ನಂಬಿಕೆ. ಇದರ ಬಗ್ಗೆ ಕ್ಯಾಬಿನೆಟ್ ಮುಂದೆ ಒಂದು ಪೇಪರ್‌ನ್ನು ತರುತ್ತಾ ಇದ್ದೇವೆ. ಜಮಾಬಂದಿ ಅಂದರೆ ಓಪನ್ ಪಬ್ಲಿಕ್ ಅಕೌಂಟಿಬಿಲಿಟಿ. ಇದನ್ನು ಜಾರಿಗೆ ತಂದರೆ ಅಕೌಂಟ್ಸ್ ವಿಚಾರದಲ್ಲಿ ನಾವು ಬಹಳಷ್ಟು ಟ್ರಾನ್ಸ್‌ಫೆರೆನ್ಸಿ ತಂದ ಹಾಗಿ ಆಗುತ್ತದೆ. ಇದನ್ನು ಕ್ಯಾಬಿನೆಟ್ ಮುಂದೆ ತರುತ್ತಾ ಇದ್ದೇವೆ, ಕ್ಯಾಬಿನೆಟ್ ಇದಕ್ಕೆ ಅನುಮತಿ ಕೊಡುತ್ತದೆ, ಇದರ ಮೂಲಕ ಸೂಕ್ತ ವ್ಯವಸ್ಥೆಯನ್ನು ಹಳ್ಳಿ ಗ್ರಾಮಗಳಲ್ಲಿ ಮಾಡಬಹುದಾಗಿದೆ.ಇನ್ನು ನಮ್ಮ ಫೈನಾನ್‌ಶಿಯಲ್ ಪ್ರೊಸೀಜರ್ಸ್ ಏನಿದೆ ಅದನ್ನು ಓವರ್‌ಹಾಲ್ ಮಾಡಬೇಕಾಗಿದೆ. ನಾವು ಹಳೆ ಕಾಲದ ಫೈನಾನ್‌ಶಿಯಲ್ ಪ್ರೊಸೀಜರ್ ಇಟ್ಟುಕೊಂಡು ನಾವು ಭ್ರಷ್ಟಾಚಾರವನ್ನು ನಿಯಂತ್ರಿಸಲು ಹೊರಟರೆ, ಅದು ಸಮರ್ಪಕವಾಗಲಿಕ್ಕಿಲ್ಲ. ಓವರ್‌ಹಾಲ್ ಫೈನಾನ್‌ಶಿಯಲ್ ಪ್ರೊಸೀಜರ್ಸ್ ಮಾಡಬೇಕು, ಕಂಪ್ಯೂಟರೈಸೇಷನ್ ಕೂಡ ಮಾಡಬೇಕು. ಕಂಪ್ಯೂಟರ್ ಮೂಲಕ ಭ್ರಷ್ಟಾಚಾರ ವಿರೋಧ ಮಾಡುವಲ್ಲಿ ನಮಗೆ ಬಹಳಷ್ಟು ಶಕ್ತಿ ಸಾಮರ್ಥ್ಯ ಬರುತ್ತದೆ. ಅದ್ದರಿಂದ ಈಗಾಗಲೇ ಈ ದಿಶೆಯಲ್ಲಿ ಕೆಲವು ಕ್ರಮಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ.single Bank account for each scheme ಎಂದು ಒಂದು ಸ್ಕೀಂ ಇದ್ದರೆ, ಅದಕ್ಕೊಂದು ಬ್ಯಾಂಕ್ ಅಕೌಂಟ್ ಇರಬೇಕು. ಒಂದನ್ನು ಬಿಟ್ಟು ಹತ್ತಿಪ್ಪತ್ತು ಬ್ಯಾಂಕ್ ಅಕೌಂಟ್‌ಗಳಲ್ಲ. ಒಂದು ಸ್ಕೀಂಗೆ ಒಂದೇ ಬ್ಯಾಂಕ್ ಅಕೌಂಟ್ ಇರಬೇಕು. ನಮ್ಮ ಅನುಭವದಲ್ಲಿ ಹತ್ತಾರು ಅಕೌಂಟ್‌ಗಳು ಇರುವುದರಿಂದ ಅದು ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುತ್ತದೆ. ಆದಕಾರಣ ಒಂದು ಸ್ಕೀಂ ಇದ್ದರೆ ಅದಕ್ಕೆ ಒಂದೇ ಬ್ಯಾಂಕ್ ಅಕೌಂಟ್ ಇರಬೇಕು. ಆಮೇಲೆ ವೀಕ್ಲಿ ನಾಲ್ಕು ಸಲ ಚೆಕ್ಸ್ ಏನು ಕೊಡುತ್ತಾರೆ ಅದು ವಾರಕ್ಕೆ ಒಂದು ಸಾರಿ ಕೊಡುವ ಹಾಗೆ ಮಾನಿಟರ್ ಆಗಬೇಕು. ಹಾಗೆಯೇ ಹೈಯರ್ ಆಫೇಸರ್ಸ್ ಕಡೆಗೆ ಚೆಕ್ಸ್ ಹೋಗಬೇಕು. ಈಗ ಚೆಕ್‌ಗಳನ್ನು ಎಷ್ಟು ಸಲ ಕೊಟ್ಟಿದ್ದಾರೆ, ಯಾವ ಅಕೌಂಟನಲ್ಲಿ ಕೊಟ್ಟಿದ್ದಾರೆಂಬುದು ಗೊತ್ತಾಗುವುದಿಲ್ಲ. Two officers should sign the cheques ಈ ವ್ಯವಸ್ಥೆಯನ್ನು ನಾವು ಈಗ ಮಾಡುತ್ತಾ ಇದ್ದೇವೆ. ಹಾಗೆಯೇ ಇಬ್ಬರು ಆಫೀಸರ್ಸ್ ಚೆಕ್ಕನ್ನು ಸೈನ್ ಮಾಡಬೇಕು ; ಒಬ್ಬರಲ್ಲ. ಅದು ಕಂಪ್ಯೂಟರೈಸೇಶನ್

ಆಗಬೇಕು. ಫೈನಾನ್ಶಿಯಲ್ ಎಕ್ಸ್ಪರ್ಟ್ಸ್ ಈ ಸಿಸ್ಟಮ್ ರಿವ್ಯೂ ಮಾಡಬೇಕು. ಎಕ್ಸ್ಟರ್ನಲ್ ಎಕ್ಸ್ಪರ್ಟ್ಸ್ ಕೂಡ ಈ ವ್ಯವಸ್ಥೆಯಲ್ಲಿ ರೂವ್ಯೂ ಮಾಡಬೇಕೆಂದು ನನ್ನ ಅಭಿಪ್ರಾಯವಾಗಿದೆ. ನಾವು ಒಂದು ಮ್ಯಾನ್ಯುಯಲ್ ಮಾಡುತ್ತಾ ಇದ್ದೇವೆ. ಎಲೆಕ್ಟೆಡ್ ಜನರು ಈ ಸ್ಕೀಮ್ಸ್ನ್ನು ಕಾರ್ಯಗತ ಮಾಡುವಾಗ ಅವರುಗಳ ಜವಾಬ್ದಾರಿ ಏನು? ಅಧಿಕಾರಸ್ಥರ ಜವಾಬ್ದಾರಿ ಏನು? ಇವುಗಳು ಸ್ಪಷ್ಟವಾಗಿಲ್ಲ ಮತ್ತು ಎಷ್ಟೋ ಜನರಿಗೆ ಇದು ಗೊತ್ತಿಲ್ಲ. ಆದಕಾರಣ ಪ್ರತಿಯೊಂದು ಸ್ಕೀಮ್ಗೆ ಎಲೆಕ್ಟೆಡ್ ಜನರು ಮತ್ತು ಆಫೀಸರ್ಸ್ ಏನು ಮಾಡಬೇಕು ಇದರ ಬಗ್ಗೆ ಒಂದು ಮ್ಯಾನುಯಲ್ ಮಾಡುತ್ತಾ ಇದ್ದೇವೆ. ಅದರ ಮೂಲಕ ಒಂದು ನಿರ್ದಿಷ್ಟತೆಯ ವ್ಯವಸ್ಥೆಯಲ್ಲಿ ಬರುತ್ತದೆ ಎಂದುನಾನು ನಂಬಿದ್ದೇನೆ. ಇನ್ನು ಗ್ರಾಮಸಭೆಗಳ ವಿಚಾರ. ಇದು ಬಹಳ ಮುಖ್ಯವಾದುದು. ಈಗ ನಾವು ಮೇ ಮತ್ತು ನವೆಂಬರ್ ತಿಂಗಳಲ್ಲಿ ಗ್ರಾಮಸಭೆಗಳನ್ನು ಕಡ್ಡಾಯವಾಗಿ ಮಾಡಬೇಕೆಂದು ಮಾಡಿದ್ದೇವೆ. ಆದರೆ ಚುನಾವಣೆಗಳು ಬರುತ್ತಿರುವುದರಿಂದ ಮೇ ತಿಂಗಳಲ್ಲಿ ಮಾಡುವಂಥ ಗ್ರಾಮಸಭೆ ಏನಿದೆ ಅದನ್ನು ಮುಂದಕ್ಕೆ ಏಕೆ ಹಾಕಬಾರದು ಎಂಬ ವಿಚಾರವು ನಮ್ಮದಾಗಿದೆ. ಏಕೆಂದರೆ ಜೂನ್ ತಿಂಗಳಲ್ಲಿ ಹೊಸ ಜನರು ಆರಿಸಿ ಬಂದನಂತರ, ಒಂದು ವರ್ಕ್ಶಾಪ್ ಮಾಡಿ, ಈ ಗ್ರಾಮ ಸಭೆಗಳನ್ನು ನಾವು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ನಡೆಸಲು ಸಾಧ್ಯ ಏನು ಬದಲಾವಣೆ ಮಾಡಬಹುದು ಎಂಬಿತ್ಯಾದಿಗಳ ಬಗ್ಗೆ ವರ್ಕ್ಶಾಪ್ ಇಡೀ ಕರ್ನಾಟಕದಲ್ಲಿ ನಡೆದು, ಜುಲೈ ತಿಂಗಳಲ್ಲಿ ಆ ಚರ್ಚೆಯ ಪ್ರಕಾರ ಆ ಗ್ರಾಮಸಭೆಗಳನ್ನು ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಜೂನ್ ತಿಂಗಳ ಸೆಕೆಂಡ್ ಹಾಫ್ನಲ್ಲಿ ಇದರ ಬಗ್ಗೆ ರಾಜ್ಯದಾದ್ಯಂತ ಚರ್ಚೆ ನಡೆಸಿ, ವರ್ಕ್ಶಾಪ್ ಮಾಡಿ, ಜುಲೈ ತಿಂಗಳಲ್ಲಿ ಹೊಸ ವಿಚಾರಧಾರೆಗಳ ಆಧಾರದ ಮೇಲೆ ಗ್ರಾಮಸಭೆಗಳನ್ನು ನಡೆಸೋಣ ಎಂಬ ವಿಚಾರ ನಮ್ಮಲ್ಲಿದೆ. ಜುಲೈನಲ್ಲಿ ಇದಾದರೆ, ಎರಡನೇ ಗ್ರಾಸಭೆಯನ್ನು ಡಿಸೆಂಬರ್ರಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ.

11.50 ಎ.ಎಂ.

ಮೇ ಬದಲು ಜೂನ್ ಸೆಕೆಂಡ್ಹಾಫ್ನಲ್ಲಿ ಇದರ ಬಗ್ಗೆ ರಾಜ್ಯಾದ್ಯಂತ ಚರ್ಚೆ ನಡೆಸಿ ವರ್ಕ್ಶಾಪ್ ಮಾಡಿ ಜುಲೈನಲ್ಲಿ ಗ್ರಾಮಸಭೆಯನ್ನು ಹೊಸ ವಿಚಾರಗಳ ಆಧಾರದ ಮೇಲೆ ನಡೆಸೋಣವೆಂಬ ಒಂದು ವಿಚಾರವಿದೆ. ಆ ಮೇಲೆ ಎರಡನೇ ಗ್ರಾಮಸಭೆಯನ್ನು ಡಿಸೆಂಬರ್ನಲ್ಲಿ ನಡೆಸಲು ಸಾಧ್ಯ. ಗ್ರಾಮಸಭೆ ಅಂದರೆ ಗ್ರಾಮದ ಒಂದು ಸಂಸತ್ ತರಹ ಕೆಲಸ ಮಾಡಬೇಕು, ಈ ವಿಚಾರವನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಬರೀ ಕಾನೂನು ಮಾಡಿದರೆ ಸಾಲದು. ಅದನ್ನು ಯಾವ ರೀತಿಯಿಂದ ಅನುಷ್ಠಾನಕ್ಕೆ ತರಬೇಕು ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ. ಜಿಲ್ಲಾ ಯೋಜನಾ ಸಮಿತಿಗಳನ್ನು ನಾವು ಮಾಡಿಲ್ಲ, ಅವನ್ನು ಕಾನೂನು ಪ್ರಕಾರ ಮಾಡಬೇಕು. ಈ ಚುನಾವಣೆಗಳಾದ ತಕ್ಷಣ ಜಿಲ್ಲಾ ಯೋಜನಾ ಸಮಿತಿಗಳನ್ನು ಮಾಡುತ್ತೇವೆ. ಮತ್ತೆ ವಾಟರ್ ಟೇಬಲ್ ನಂತಹ ಬಹಳ ಗಂಭೀರವಾದ ಸಮಸ್ಯೆಗಳಿಗೆ ಪ್ಲಾನಿಂಗ್ ಬೇಕಾಗುತ್ತದೆ. ಅವರ ಕಡೆಯಿಂದ ಮಾಡಿಸಬೇಕೆಂಬ ವಿಚಾರವೂ ಇದೆ. ಈ ಬಜೆಟಿನ ಬಗ್ಗೆ ಹೇಳಬೇಕಾದರೆ 4,589 ಕೋಟಿ ರೂಪಾಯಿಯಷ್ಟು ಹಣವನ್ನು ಪಂಚಾಯಿತಿಗಳಿಗೆ ನಾವು ವಿತರಿಸುತ್ತಿದ್ದೇವೆ. 4,500 ಕೋಟಿ ರೂಪಾಯಿಗಳಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಆರ್ಪಿಪಿಆರ್ ಇಲಾಖೆಗೆ ಬರುತ್ತದೆ. ಬಾಕಿ 3,500 ಕೋಟಿ ರೂಪಾಯಿಗಳನ್ನು ಮೂರು ಹಂತದ ವ್ಯವಸ್ಥೆಗೆ ಹಂಚುತ್ತಿದ್ದೇವೆ. 4,500 ಅಂದರೆ ಹೋದ ವರ್ಷ 4,234 ಇದ್ದುದನ್ನು ಪ್ರತಿಶತ 8ರಷ್ಟು ಜಾಸ್ತಿ ಮಾಡಿದಂತಾಗುತ್ತದೆ. ಇಷ್ಟೊಂದು ಹಣದ ವಿಕೇಂದ್ರೀಕರಣ ಬಹುಶಃ ಈ ದೇಶದ ಯಾವ ರಾಜ್ಯದಲ್ಲಿ ಕೂಡ ಮಾಡಿಲ್ಲ ಎಂದು ನಾನು

ಹೇಳಲಿಕ್ಕೆ ಇಷ್ಟಪಡುತ್ತೇನೆ. ಇಂಥಾದ್ದನ್ನು ಯಾರೂ ಮಾಡಿಲ್ಲ. ಆಮೇಲೆ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತು ಹೇಳಬೇಕು : ಸ್ವಚ್ಛ ಗ್ರಾಮಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಏನು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ ಅದು ಅಷ್ಟಕ್ಕೇ ಸೀಮಿತವಾಗಿಲ್ಲ. ಈ 10 ಕೋಟಿ ರೂಪಾಯಿಗಳನ್ನು ಉಪಯೋಗಿಸಿ ಹೆಚ್ಚುಕಡಿಮೆ 170 ಕೋಟಿ ರೂಪಾಯಿಗಳಷ್ಟನ್ನು ಹುಡುಕ್ಕೋದಿಂದ ಎತ್ತಲಿಕ್ಕೆ ಸಾಧ್ಯವಾಗುತ್ತದೆ. ಸಾರ್ವಜನಿಕ ವಂತಿಗೆ ಶೇಕಡ 10 ಎಂದು ಇಟ್ಟುಕೊಂಡರೆ ಅದು 20 ಕೋಟಿ ರೂಪಾಯಿಯಾಗುತ್ತದೆ. ನಿರ್ಮಲ ಗ್ರಾಮ ಯೋಜನೆಗೆ ಬಜೆಟ್‌ನಲ್ಲಿ 15 ಕೋಟಿ ರೂಪಾಯಿ ಇದೆ. ಈ ರೀತಿ ಉಪಯೋಗಿಸಿದರೆ 200 ಕೋಟಿ ರೂಪಾಯಿಗಳು ಒಂದು ಸಾವಿರ ಗ್ರಾಮಕ್ಕೆ ಬೇಕಾಗುತ್ತದೆ. ಒಂದು ಸ್ವಚ್ಛ ಗ್ರಾಮವೆಂದರೆ ಪೇವ್‌ಮೆಂಟ್, ಡ್ರೈನೇಜ್, ಲ್ಯಾಟ್ರಿನ್ಸ್ ಮುಂತಾದವುಗಳನ್ನು ಹಾಗೂ ಮೆನ್ಯೂರ್ ಯಾರ್ಡ್‌ಗಳನ್ನು ಮಾಡಲಿಕ್ಕೆ ಉಪಯೋಗಿಸಬಹುದು. ಇದರಲ್ಲಿ ಎಲ್ಲ ಪಕ್ಷದ ಮಾನ್ಯ ಸದಸ್ಯರೂ ಆಸಕ್ತಿ ವಹಿಸಿಬೇಕು. ಇದನ್ನು ಚಳುವಳಿ ತರಹ ಬೆಳೆಸಬೇಕು. ಕರ್ನಾಟಕದಲ್ಲಿ 56 ಸಾವಿರ ಹ್ಯಾಬಿಟೇಶನ್ಸಿವೆ. ಅದರಲ್ಲಿ ಒಂದು ಸಾವಿರ ಗ್ರಾಮಗಳನ್ನು ನಾವು ಸ್ವಚ್ಛಗ್ರಾಮವೆಂದು ಮಾಡಿದರೆ ಸಾಕಾಗುವುದಿಲ್ಲ. ಆದರೆ ಇದು ಒಂದು ಪ್ರೇರಣೆ ಕೊಡಲಿ ಎಂದು ಮಾಡುತ್ತಿದ್ದೇವೆ. ಈ ರೀತಿ ನಾವು ಸ್ವಚ್ಛ ಗ್ರಾಮದ ಕಲ್ಪನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವೆಂಬ ಆತ್ಮವಿಶ್ವಾಸ ಬರಲಿ. ಜನ ಇದರಲ್ಲಿ ಭಾಗವಹಿಸಲಿ. ಜನ ಲ್ಯಾಟ್ರಿನ್ಸ್ ಬೇಕು ಎಂದು ಕೇಳಲಿ. ಏಕೆಂದರೆ ಪ್ರತಿ ಶಾಲೆಯಲ್ಲೂ ಒಂದು ಲ್ಯಾಟ್ರಿನ್ ಇರಬೇಕು ಎಂದು ನಾವು ಹೇಳುತ್ತಿದ್ದೇವೆ. ಮನೆಯಲ್ಲೂ ಲ್ಯಾಟ್ರಿನ್ ಇರಬೇಕು. ಲ್ಯಾಟ್ರಿನ್ ಕಟ್ಟಲು ಜಾಗವಿಲ್ಲದೇ ಹೋದರೆ ಕಮ್ಯುನಿಟಿ ಲ್ಯಾಟ್ರಿನ್ ಇರಬೇಕು ವಗೈರೆ ವಗೈರೆ. ಆದರೆ ಇದನ್ನು ಕೇಳಬೇಕು, ಮಾಡಿಸಬೇಕು ಎಂಬ ಒಂದು ಚಿಂತನೆ, ಮತ್ತೆ ಜನಶಕ್ತಿಯನ್ನು ಅದು ಬೆಳೆಸಲಿ ಎಂದು ನಾನು ಆಶಯ ಮಾಡುತ್ತಿದ್ದೇನೆ. ಆಮೇಲೆ ಸ್ವಉದ್ಯೋಗ. ಇದರ ಬಗ್ಗೆ ಹೇಳುವುದಾದರೆ ಈ ಬಜೆಟ್‌ನಲ್ಲಿ 20 ಕೋಟಿ ರೂಪಾಯಿಗಳನ್ನು ಇನ್‌ಫ್ರಾಸ್ಟ್ರಕ್ಚರ್ ಮತ್ತು ತರಬೇತಿಗೋಸ್ಕರ ಇಟ್ಟಿದ್ದಾರೆ. ಅಂದರೆ ಟ್ರೈನಿಂಗ್ ಕೊಡಲು ಯಾವ ಇನ್‌ಫ್ರಾಸ್ಟ್ರಕ್ಚರ್ ಬೇಕಾಗುತ್ತದೊ ಅದಕ್ಕೋಸ್ಕರ ಈ ಹಣವಿದೆ. ಇದನ್ನು ಕೆಲವು ಸಂಸ್ಥೆಗಳಿಗೆ ನಾವು ಕೊಡುತ್ತಿದ್ದೇವೆ. ಕೃಷಿ ವಿಶ್ವವಿದ್ಯಾಲಯಗಳು, ಬೆಂಗಳೂ ಮತ್ತು ಧಾರವಾಡಗಳಲ್ಲಿವೆ. 7 ಜಿಲ್ಲೆಗಳಲ್ಲಿ ಕೂಡ ಆರ್ಗನೈಜೇಶನ್ಸ್ ಇದೆ. ದಕ್ಷಿಣ ಕನ್ನಡ, ಮೈಸೂರು, ಬೆಂಗಳೂರು ರೂರಲ್ ಚಿತ್ರದುರ್ಗ, ಧಾರವಾಡ, ಉಡುಪಿ ಮತ್ತು ಬಿಜಾಪುರಗಳಲ್ಲಿದೆ. ಅನಂತರ ಕಿಯೋನಿಕ್ಸ್ ಅಧ್ಯಕ್ಷರೆ, ಇವರಿಂದ ಪ್ರತಿ ತಾಲ್ಲೂಕು ಮಟ್ಟಕ್ಕೆ ಒಂದು ಕಂಪ್ಯೂಟರ್ ತರಬೇತಿ ಕೇಂದ್ರ ಮಾಡಲು ಸಾಧ್ಯವಿದೆ. ಅದಕ್ಕೇನು ಜಾಸ್ತಿ ಹಣ ಬೇಕಾಗುವುದಿಲ್ಲ. ಪ್ರತಿ ತಾಲ್ಲೂಕಿಗೆ 6 ಲಕ್ಷ ರೂಪಾಯಿ ಗಳು ಖರ್ಚು ಮಾಡಿದರೆ ಕಿಯೋನಿಕ್ಸ್‌ನವರು ಪ್ರತಿ ತಾಲ್ಲೂಕಿನಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರವನ್ನು ಮಾಡಲು ಸಾಧ್ಯ. ಅದನ್ನು ಮಾಡಬೇಕು ಎಂದು ನಾವು ಹೇಳಿದ್ದೇವೆ. ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಆಯೋಗವಿದೆ. ಅಪಾರೆಲ್ ಟ್ರೈನಿಂಗ್ ಮತ್ತು ಡಿಸೈನಿಂಗ್ ಸೆಂಟರಿದೆ. ಇಂತಹ ಸಂಸ್ಥೆಗಳಿಗೆ ತರಬೇತಿ ನೀಡುವುದಕ್ಕೋಸ್ಕರ ಏನು ಇನ್‌ಫ್ರಾಸ್ಟ್ರಕ್ಚರ್ ಬೇಕು ಅದನ್ನು ಸರ್ಕಾರ ಕೊಡುತ್ತದೆ. ಅದಕ್ಕೆ ತಗಲುವ ಹಣವನ್ನೂ ಸರ್ಕಾರ ಕೊಡುತ್ತದೆ. ಆದರೆ ಆ ತರಬೇತಿ ಪಡೆದು ಸ್ವಉದ್ಯೋಗ ಮಾಡಲಿಕ್ಕೆ ಶಕ್ತಿ ಬರಬೇಕು. ಬ್ಯಾಂಕಿನಿಂದ ಅವರಿಗೆ ಸಾಲ ಸಿಗುವ ವ್ಯವಸ್ಥೆ ನಾವು ಈ ಪ್ರಕಾರ ಮಾಡಿದರೆ ಕಷ್ಟವಾಗುವುದಿಲ್ಲ. ಮತ್ತೆ ಸೆಲ್ಫ್ ಹೆಲ್ಪ್ ತಂಡಗಳನ್ನು ನಾವು ಮಾಡುತ್ತಿದ್ದೇವೆ. ಸ್ವಉದ್ಯೋಗ ಏನಿದೆ ಇದಕ್ಕೆ ನಾವು ಬಹಳ ಲಕ್ಷ್ಯ ಕೊಡಬೇಕಾಗುತ್ತದೆ. ತಮಗೆ ಗೊತ್ತಿರುವಂತೆ ಇಡೀ ದೇಶದಲ್ಲಿ ಒಂದು ವರ್ಷಕ್ಕೆ ೭೦ಂದು ಕೋಟಿ ಜನ ಹೊಸ ಕೆಲಸ ಕೇಳುತ್ತಾರೆ ಎಂದು ಒಂದು ಲೆಕ್ಕ ಮಾಡಿದ್ದಾರೆ. ಈ ಕೋಟಿಯನ್ನು ನಮ್ಮ ಜನಸಂಖ್ಯೆಗೆ ಹೋಲಿಸಿದರೆ ನಮ್ಮದು 5

ಪರ್ಸೆಂಟ್ ಇದೆ. ಅಂದರೆ ಒಂದು ಕೋಟಿಯಲ್ಲಿ ಐದು ಲಕ್ಷ ಜವವಾದರೂ ನಾವು ಕೆಲಸದ ಅವಕಾಶಗಳನ್ನು ಮಾಡಬೇಕಾಗುತ್ತದೆ. ಇದರಲ್ಲಿ 60 ಪರ್ಸೆಂಟ್ ಅಂದರೆ ಮೂರು ಲಕ್ಷ ಕೃಷಿಯಲ್ಲಿ ತೊಡಗಿರುತ್ತಾರೆ ಎಂದು ಇಟ್ಟುಕೊಂಡರೂ ಕೂಡ ಇನ್ನೂ ಎರಡು ಲಕ್ಷ ಜನಉಳಿಯುತ್ತಾರೆ. ಅದರಲ್ಲಿ ಸಂಘಟಿತ ವಲಯದಲ್ಲಿ 10 ಪರ್ಸೆಂಟ್ ಗಿಂತ ಜಾಸ್ತಿ ಕೆಲಸ ಸಿಗಲಿಕ್ಕೆ ಸಾಧ್ಯವಿಲ್ಲ. ಅಂದರೆ 50 ಸಾವಿರ ಜನರಿಗೆ ಕೆಲಸ ಸಿಗಬಹುದು 1.5 ಲಕ್ಷ ಜನ ಏನು ಉಳಿಯುತ್ತಾರೆ ಅವರಿಗೆ ಸ್ವಉದ್ಯೋಗದ ತರಬೇತಿ ಅನಿವಾರ್ಯವಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮಕ್ಕೂ ಕೂಡ ಈ ಸರ್ಕಾರ ಬಹಳಷ್ಟು ಆದ್ಯತೆ ಕೊಟ್ಟು ತರಬೇತಿ ಕೇಂದ್ರಗಳನ್ನು ಎಷ್ಟು ಕಡೆ ಮಾಡಲು ಸಾಧ್ಯ ಅಷ್ಟು ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ವಾಟರ್‌ಸಪ್ಲೈ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಏಕೆಂದರೆ ವಾಟರ್ ಡಿಬೇಟ್‌ಗೆ ಉತ್ತರ ಹೇಳುವಾಗ ಸಂಪೂರ್ಣ ಚಿತ್ರ ನಾನು ಕೊಟ್ಟಿದ್ದೇನೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ 450 ಕೋಟಿ ರೂಪಾಯಿಗಳನ್ನು ವಾಟರ್‌ಗೋಸ್ಕರ ಖರ್ಚು ಮಾಡುತ್ತಿದ್ದೇವೆ. ಮತ್ತೆ ವಾಟರ್ ಟೇಬಲ್, ಗ್ರೌಂಡ್‌ವಾಟರ್ ಟೇಬಲಿನ ರೀಚಾರ್ಜ್ ಕಡೆ ಗಮನ ಕೊಡಬೇಕು ಎಂದು ನಾನು ಆಗಲೇ ಹೇಳಿದೆ. ಸರ್ಫೇಸ್ ವಾಟರ್ ಅನ್ನು ಕೂಡ ಯಾವ ರೀತಿ ಅದನ್ನು ಉಪಯೋಗಿಸಬೇಕು ಇದರ ಬಗ್ಗೆ ಚಿಂತನೆಯನ್ನು ಪ್ರಾರಂಭ ಮಾಡಿದ್ದೇವೆ. ಮತ್ತೆ ಅಡಿಶನಲ್ ಪೈಪ್ಡ್ ವಾಟರ್ ಒಂದು ಸಾವಿರ, ಮತ್ತೆ ಅಡಿಶನಲ್ ಮಿನಿವಾಟರ್ ಒಂದು ಸಾವಿರ- ಇವು ಒಂದೇ ವರ್ಷದಲ್ಲಿ ಪೂರೈಸುವಂತಹ ಕಾರ್ಯಕ್ರಮಗಳನ್ನು ಈ ವರ್ಷ ನಾವು ಮಾಡಲಿಕ್ಕೆ ಹೊರಟಿದ್ದೇವೆ. ಕರ್ನಾಟಕ ಟೆಕ್ನಾಲಜಿ ಮಿಶನ್ ಇದೆ, ಮಾನ್ಯ ಮುಖ್ಯಮಂತ್ರಿಗಳೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ. ವಾಟರ್ ಬಗ್ಗೆ ಪಾಲಿಸೀಸ್ ಮತ್ತು ಕಾರ್ಯ ಕ್ರಮಗಳನ್ನು ನೋಡಿ ಕೊಳ್ಳಲಿಕ್ಕೆ ಇದ್ದಾರೆ. ಅದರಲ್ಲಿ ನಮ್ಮ ಸಚಿವರೂ ಸಂಪೂರ್ಣವಾಗಿ ಭಾಗವಹಿಸಲೂ ಅವಕಾಶವಿದೆ. ರಸ್ತೆಗಳ ಬಗ್ಗೆ ಒಂದು ಮಾತು ಹೇಳಬೇಕು. ಇಡೀ ರಾಜ್ಯದಲ್ಲಿ 1.26 ಲಕ್ಷ ಕಿ.ಮಿ ರಸ್ತೆ ಇದೆ. ಅದರಲ್ಲಿ 72 ಸಾವಿರ ಕಿಮೀ ರೂರಲ್ ರೋಡ್ಸ್ ಇದೆ. ಇಡೀ ರಾಜ್ಯದಲ್ಲಿ ಎಲ್ಲ ರಸ್ತೆಗಳನ್ನೂ ನಾವು ತೆಗೆದುಕೊಂಡರೂ 1.26 ಲಕ್ಷ ಆದರೆ ರೂರಲ್ ರೋಡ್ಸ್ 72 ಸಾವಿರ ರೂಪಾಯಿಗಳು ಇದೆ. ಇದರ ಬಗ್ಗೆ ಸಾಕಷ್ಟು ಮಾಹಿತಿ ನಮಗಿಲ್ಲವೆಂದು ನಾನು ಒಪ್ಪಿಕೊಳ್ಳುತ್ತಿದ್ದೇನೆ ಅದಕ್ಕೋಸ್ಕರ ಇದರ ಬಗ್ಗೆ ಒಂದು ಕಾಂಪ್ರಹೆನ್ಸಿವ್ ಸೆಟ್‌ವರ್ಕ್ ಸರ್ವೆ ಆಗಬೇಕು. ಮ್ಯಾಪಿಂಗ್ ಆಗಬೇಕು, ರಸ್ತೆಗಳ ವರ್ಗೀಕರಣವಾಗಬೇಕು, ಆರ್ಹ ಇಂಜಿನಿಯರುಗಳಿಂದ ಮತ್ತು ಕನ್ಸಲ್ಟಿಂಗ್ ಫರ್ಮ್‌ಗಳಿಂದ. ಈ ಕೆಲಸವನ್ನು ಈ ವರ್ಷದಲ್ಲಿ ಮಾಡಿ ರೂರಲ್ ರೋಡ್ಸ್ ಬಗ್ಗೆ ಒಂದು ಸ್ಪಷ್ಟ ಚಿತ್ರ ಈ ಸಭೆಯ ಮುಂದೆ, ಕರ್ನಾಟಕ ಜನತೆಯ ಮುಂದೆ ಇಡಲಿಕ್ಕೆ ಸಾಧ್ಯವಾಗುತ್ತದೆ. ಅವುಗಳ ಮೇಂಟೆನೆನ್ಸ್‌ಗೆ ಎಷ್ಟು ಬೇಕು ಎಂಬ ಕಡೆ ಗಮನ ಕೊಡಲೂ ಸಾಧ್ಯವಾಗುತ್ತದೆ. ಈ ವರ್ಷ ಸುಮಾರು 200 ಕೋಟಿ ರೂಪಾಯಿ ರಸ್ತೆಗಳಿಗೆ ಖರ್ಚಾಗಬಹುದು. ಹೋದವರ್ಷ ಪ್ರಾರಂಭಿಸಿರುವ ತಾಲ್ಲೂಕಿಗೊಂದು ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆ ಏನಿದೆ ಅದು ಇನ್ನೂ ಕಾರ್ಯಗತವಾಗಲಿಲ್ಲ. ಅದಕ್ಕೆ ಎಲ್ಲಾ ಕಡೆ ಟೆಂಡರ್ಸ್ ಕರೆದಿದ್ದಾರೆ. ಅದನ್ನು ಇಷ್ಟರಲ್ಲಿಯೇ ಪ್ರಾರಂಭ ಮಾಡಿ ಈ ವರ್ಷ ನಾವು ಪೂರೈಸಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ಸೇರಿಸಿಕೊಂಡರೂ ಕೂಡ 200ಕೋಟಿ ರೂಪಾಯಿಗಳು ರೂರಲ್ ರೋಡ್ಸ್ ಬಗ್ಗೆ ನಾವು ಖರ್ಚು ಮಾಡುವುದಕ್ಕೆ ಈ ವರ್ಷ ಸಾಧ್ಯವಾಗುತ್ತದೆ. ಇದನ್ನು ಲೆಕ್ಕ ಹಾಕಿದರೆ ಇದು ಸಾಲಲಿಕ್ಕೆ ಇಲ್ಲ. ಅದಕ್ಕೇ ನಾನು ಹೇಳಿದೆ. ನಬಾರ್ಡ್‌ನಿಂದ ವರ್ಷಾವರ್ಷಾ ಐದುನೂರು ಕೋಟಿ ರೂಪಾಯಿ ಆದರೂ ನಾವು ತರಿಸುವ ಪ್ರಯತ್ನ ಮಾಡಬೇಕು. ಅಂದರೆ ಈ ರೂರಲ್ ರೋಡ್ಸ್ ಕಡೆಗೆ ನಾವು ಸಾಕಷ್ಟು ಗಮನ ಕೊಟ್ಟಂತೆ ಆಗುತ್ತದೆ. ಇನ್ನು ಮೈನರ್ ಇರಿಗೇಷನ್ ವಿಚಾರ. ಇದು ಕೂಡ 100 ಎಕರೆಗಿಂತ ಕಡಿಮೆ ಇರತಕ್ಕಂಥಹ 33 ಸಾವಿರ ಕೆರೆಗಳು ಕರ್ನಾಟಕದಲ್ಲಿವೆ. ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಕಡೆಗೆ 3,000 ಕೆರೆಗಳು

ಇದ್ದರೆ, ಈ ಜಿಲ್ಲಾ ಪರಿಷತ್ ಕಡೆಗೆ33 ಸಾವಿರ ಕೆರೆಗಳು, ನೂರು ಎಕರೆಗಿಂತ ಕಡಿಮೆ ಆಯಕಟ್ಟು ಇರತಕ್ಕದ್ದು. ಇದಕ್ಕೆ ಕೂಡ ನಾವೇನು ಖರ್ಚು ಮಾಡುತ್ತಿದ್ದೇವೆ? ಅದು ಸಾಕಷ್ಟು ಇದೆ ಎಂದು ನಾನು ಹೇಳುತ್ತಿಲ್ಲ. ಇದಕ್ಕೂ ಒಂದು ನೂರು ಕೋಟಿ ರೂಪಾಯಿ ವರ್ಷಕ್ಕೆ ಬೇಕಾಗುತ್ತದೆ. ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫಂಡ್ ಎಂದು ಮಾಡಿ ನಾವು ಈ ಕೆರೆಗಳ ಕಡೆಗೆ ಹೆಚ್ಚಿನ ಗಮನ ಕೊಡುವ ಅವಶ್ಯಕತೆ ಇದೆ. ಮತ್ತೆ ರೂರಲ್ ಎನರ್ಜಿ ಬಗ್ಗೆ ಹೇಳಬೇಕಾದರೆ 25 ಸಾವಿರ ಬಯೋಗ್ಯಾಸ್ ಪ್ಲಾಂಟ್ಸ್ ಮತ್ತು ಐದು ಲಕ್ಷ ಸ್ಕೋಕಲೆಸ್ ಚೂಲಾಸ್ ಈ ವರ್ಷದಲ್ಲಿ ಮಾಡಬೇಕೆಂದು ನಾವು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೇವೆ. ಆಮೇಲೆ ಸೋಲಾರ್ ಪಂಪಿಂಗ್ ಡಿವೈಸಸ್. ಅದನ್ನು ಮಾಡಬೇಕು. ಈ ಸೋಲಾರ್ ಪಂಪಿಂಗ್‌ನಿಂದ ಒಂದು ಪಂಪಿಗೆ ಎರಡು ಲಕ್ಷ ರೂಪಾಯಿ ಆದರೂ ಕೂಡ ಮೇಂಟೆನೆನ್ಸ್ ಕಾಸ್ಟ್ ಬಹಳ ಕಡಿಮೆ ಇರುತ್ತದೆ. ಅದನ್ನು ನಾವು ಉಪಯೋಗಿಸಬೇಕು. ಅದನ್ನು ಎಲ್ಲರೂ ಉಪಯೋಗಿಸುವ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಷ್ಟು ನಮ್ಮ ಕಾರ್ಯಕ್ರಮದಲ್ಲಿ ಮುಖ್ಯ ಅಂಶಗಳು. ಮತ್ತು ಈ ಕಾರ್ಯಕ್ರಮ ನಾವೇನು ಹೊಸದಾಗಿ ಚುನಾವಣೆ ಮಾಡುತ್ತಿದ್ದೇವೆ. ಇದರಿಂದ ಈ ಕಾರ್ಯಕ್ರಮಕ್ಕೆ ಸಾಕಷ್ಟು ಜನಪ್ರಿಯತೆ ಮತ್ತು ಜನಶಕ್ತಿ ಸಿಗಲಿ ಎಂದು ಹೇಳಿ ನಾನು ಹಾರೈಸುತ್ತೇನೆ.

+ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರ ತುಂಬಾ ಹರ್ಷದಾಯಕ ಇದೆ. ಅದನ್ನು ನೋಡಿ ಜನ ಚುನಾವಣೆ ನಡೆಸುವುದಿಲ್ಲ. ಜನ ಚುನಾವಣೆ ಬೇರೆ ರೀತಿಯಲ್ಲಿ ನಡೆಸುತ್ತಾರೆ. ಅದು ಫಲಿತಾಂಶ ಬಂದನಂತರ ನೋಡೋಣ. ಆದರೆ ಒಂದು ವಿಚಾರ ಅವರಿಂದ ನಾನು ನಿರೀಕ್ಷಿಣೆ ಮಾಡತಕ್ಕದ್ದು ಗ್ರಾಮಸಭೆಗಳನ್ನು ಜುಲೈನಲ್ಲಿ ಕರೆಯುತ್ತೇವೆಂದು ಹೇಳಿದರು. ಜುಲೈ ಅಂತೂ ನನಗೆ ಸಾಧ್ಯವಾಗುವುದಿಲ್ಲ. ಜುಲೈನಲ್ಲಿ ಭಾರೀ ಮಳೆ ಇರತಕ್ಕದ್ದು, ಬಹುತೇಕ ದಕ್ಷಿಣ ಕನ್ನಡ ಜಿಲ್ಲೆ, ನಮ್ಮ ಮಲೆನಾಡಿನ ಇಂತಿಷ್ಟು ಭಾಗ, ಶಿವಮೊಗ್ಗ, ಚಿಕ್ಕಮಗಳೂರು ಎಲ್ಲಾ ಕಡೆ ಭಾರಿ ಮಳೆ ಇರತಕ್ಕ ಕಾಲ ಜುಲೈ ತಿಂಗಳು. ಎರಡನೆಯದು ಇವರು ಹೇಳಿರತಕ್ಕವೆಲ್ಲ ಸ್ಕೀಮ್‌ಗಳಿಗೆ ಅಕೌಂಟಬಿಲಿಟಿ ಯಾರು? ಜವಾಬ್ದಾರಿ ತೆಗೆದುಕೊಳ್ಳುವವರು ಯಾರು? ಇದಿಷ್ಟು ಕಳಪೆ ಕೆಲಸಗಳು. ಇವತ್ತು ತಾವು ವಾಟರ್ ಟೇಬಲ್ ಅನ್ನು ಮೇಲೆ ತರುತ್ತೇವೆ ಎಂದು ಹೇಳಿ ಈಗ ಎಲ್ಲಾ ಗ್ರಾಮಗಳಲ್ಲಿ ಕೂಡ ವಾಟರ್ ಬಂಡ್ ಎಂದು ಕಟ್ಟುತ್ತಾರೆ. ಎಲ್ಲೋ ದಿಣ್ಣೆಯ ಮೇಲೆ ಹೋಗಿ ಒಂದು ಅಡ್ಡ, ಏರಿ ಕಟ್ಟಿ ಅಲ್ಲಿ ಕೆಲಸ ತೀರಿತು ಎಂದು ಹೇಳಿ 50-60 ಸಾವಿರ ರೂಪಾಯಿ ಅಥವಾ ಒಂದು ಲಕ್ಷ ರೂಪಾಯಿವರೆಗೆ ಬಿಲ್ ಮಾಡಿಕೊಂಡಿರತಕ್ಕದ್ದನ್ನು ನಾವು ನೋಡಿದ್ದೇವೆ. ಅನೇಕ ಸಂದರ್ಭದಲ್ಲಿ ಸಂಬಂಧಪಟ್ಟಂತಹ ಇಲಾಖೆಯ ಗಮನಕ್ಕೆ ತಂದರೂ ಆಗಲಿಲ್ಲ. ಹಣ ಖರ್ಚಾಗುತ್ತದೆ. ಸರ್ಕಾರ ಹಣ ಖರ್ಚು ಮಾಡಬಾರದು ಎಂದಲ್ಲ. ಸರ್ಕಾರ ಹಣ ಖರ್ಚು ಮಾಡಿದರೂ ಸರಿಯಾದ ರೀತಿಯಲ್ಲಿ ವಿನಿಯೋಗ ಆಗುತ್ತಿಲ್ಲ. ಇವತ್ತು ತಾವೇನು 4,500 ಕೋಟಿ ರೂಪಾಯಿ ಈ ಒಂದು ವ್ಯವಸ್ಥೆ ಮಾಡುತ್ತೇನೆ ಎನ್ನುವ ಮಾತನ್ನು ತಾವೇನು ಹೇಳುತ್ತಿದ್ದೀರಿ ಈ 4500 ಕೋಟಿ ರೂಪಾಯಿ ಯಾವ ರೀತಿ ಖರ್ಚು ಮಾಡಬೇಕು ಎಂಬ ಬಗ್ಗೆ ಜನ ಈಗಾಗಲೇ ಸಿದ್ಧರಾಗಿದ್ದಾರೆ. ಅದು ಯಾವ್ಯಾವ ಭಾಗಕ್ಕೆ ಎಲ್ಲೆಲ್ಲಿ ಹೋಗುತ್ತದೆ ಎಂದು ಜನ ಅರ್ಥ ಮಾಡಿಕೊಂಡಿದ್ದಾರೆ. ನನಗೆ ಗೊತ್ತಿರತಕ್ಕಂಥಹ ವಿಚಾರವೆಲ್ಲ ತಮಗೂ ಗೊತ್ತಿದೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ, ಇದರಲ್ಲಿ ಗುಟ್ಟೇನೂ ಇಲ್ಲ, ಮರೆ ಮಾಚು ಇಲ್ಲ. ಇದು. ಓಪನ್ ಸೀಕ್ರೆಟ್ ಇದ್ದ ಹಾಗೆ. ಇದರ ಬಗ್ಗೆ ಯಾವುದೇ ಒಂದು ಕಾರ್ಯಕ್ರಮ ತಮ್ಮಲ್ಲಿ ಕಾಣುತ್ತಿಲ್ಲ. ಕಾರ್ಯಕ್ರಮದ

ಬಗ್ಗೆ ಯಾವುದೇ ಖರ್ಚು ಮಾಡಿದರೂ ಕೂಡ ತಾವೇನು ಕೆಲವು ಕಾರ್ಯಕ್ರಮದ ಬಗ್ಗೆ ಹೇಳಿದಿರಿ. ಜಮಾ ಮನ್ನಾ ಮಾಡುತ್ತೇವೆ, ಅದು ಇದು ಮಾಡುತ್ತೇವೆಂದು ಹೇಳಿದಿರಿ. ಮೊನ್ನೆನಾನು ಯಾವುದೋ ಪತ್ರಿಕೆಯಲ್ಲಿ ನೋಡಿದೆ. ಒಬ್ಬ ವಿಲೇಜ್ ಅಕೌಂಟೆಂಟ್ ಮನೆಯಲ್ಲಿ ಲಕ್ಷಾಂತರ ರೂಪಾಯಿ ಸಿಗುತ್ತದೆ ಎನ್ನುವುದಾದರೆ ತಾವು ಅರ್ಥ ಮಾಡಿಕೊಳ್ಳಬೇಕು. ಆ ವಿಲೇಜ್ ಅಕೌಂಟ್ಂಟ್ ಮನೆಯಲ್ಲಿಯೇ ಲಕ್ಷಾಂತರ ರೂಪಾಯಿ ಸಿಗುವುದಾದರೆ ಆತ ಏನು ಮಾಡಿರಬಹುದು? ಇದು ಸರ್ವೇಸಾಮಾನ್ಯವಾಗಿ ಇರತಕ್ಕ ವಿಚಾರ. ಇದರ ಬಗ್ಗೆ ತಾವು ಗಮನ ಹರಿ ಸಲಿಲ್ಲ. ಲ್ಯಾಟ್ರಿನ್ ಬಗ್ಗೆ ಬಹಳ ಹೇಳಿದಿರಿ. ಇದು ಅತ್ಯವಶ್ಯಕವಾಗಿ ಆಗಬೇಕಾಗಿರತಕ್ಕಂಥ ಒಂದು ಸ್ಕೀಮ್. ಆದರೆ ಎಷ್ಟರಮಟ್ಟಿಗೆ ಲ್ಯಾಟ್ರಿನ್ ಬಗ್ಗೆ ಬಹಳ ಹೇಳಿದಿರಿ. ಇದು ಅತ್ಯವಶ್ಯಕವಾಗಿ ಆಗಬೇಕಾಗಿರತಕ್ಕಂಥಹ ಒಂದು ಸ್ಕೀಮ್. ಆದರೆ ಎಷ್ಟರಮಟ್ಟಿಗೆ ಲ್ಯಾಟ್ರಿನ್ ಆಗುತ್ತಿದೆ? ಲ್ಯಾಟ್ರಿನ್‌ಗೆ ಸರ್ಕಾರ ಕೊಡುವಂತಹ ದುಡ್ಡು, ಸರ್ಕಾರ ಕೊಡತಕ್ಕಂಥ ಸಾಮಾನು ತೆಗೆದುಕೊಂಡು ಲ್ಯಾಟ್ರಿನ್‌ಗೆ ಎರಡು ಮರೆ ಮಾಡಿ ಮಣ್ಣು ಮುಚ್ಚಿರತಕ್ಕದ್ದನ್ನು ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಹೋದರೆ ಕಾಣುತ್ತದೆ. ಲ್ಯಾಟ್ರಿನ್‌ಗಿಂತ ಮೊದಲು ನೀರು ಆಗಬೇಕು. ಈ ಸ್ವಚ್ಛತೆ ಹೆಸರುಗಳನ್ನು ತಾವೇನು ಹೇಳುತ್ತೀರಿ. ಲ್ಯಾಟ್ರಿನ್ ಎಂದು ಶಬ್ದ ಬಂದ ತಕ್ಷಣ ನೀರಿನ ಅವಶ್ಯಕತೆ ಇದೆ. ನೀರು ಇಲ್ಲದೇ ಇದ್ದರೆ ಲ್ಯಾಟ್ರಿನ್ ಆಗುವುದಿಲ್ಲ. ಯಥೇಚ್ಛ ವಾದಂತಹ ನೀರು ಲ್ಯಾಟ್ರಿನ್‌ಗೆ ಬೇಕಾಗುತ್ತದೆ. ಮನುಷ್ಯ ಸ್ನಾನ ಮಾಡುವುದಕ್ಕಿಂತ ಕುಡಿಯುವುದಕ್ಕಿಂತ ಹೆಚ್ಚಾಗಿ ನೀರು ಲ್ಯಾಟ್ರಿನ್‌ಗೆ ಬೇಕಾಗುತ್ತದೆ. ಲ್ಯಾಟ್ರಿನ್ ಕ್ಲೀನ್ ಇಲ್ಲ ಎಂದರೆ ಒಂದು ದಿವಸ ಮಾತ್ರ ಲ್ಯಾಟ್ರಿನ್‌ಗೆ ಹೋಗುತ್ತಾರೆ. ಎರಡನೆಯ ದಿವಸ ಲ್ಯಾಟ್ರಿನ್ ಒಳಗೆಡ ಯಾರೂ ಹೋಗುವುದಿಲ್ಲ. ಅಂದರೆ ಲ್ಯಾಟ್ರಿನ್‌ಗೋಸ್ಕರ ನೀವು ಖರ್ಚು ಮಾಡತಕ್ಕದ್ದು 4-5 ಸಾವಿರ ರೂಪಾಯಿಗಳು ಖರ್ಚು ಆಯಿತು. ಅವನು ಯಥಾಪ್ರಕಾರ ಬೀದಿಗೆ ಹೋಗುವುದಂತೂ ತಪ್ಪಲಿಲ್ಲ. ಅಂದ ಮೇಲೆ ನೀರಿನ ವ್ಯವಸ್ಥೆ ಅತಿ ಪ್ರಮುಖವಾಗಿ ಇವತ್ತು ಮೊದಲು ಆಗಬೇಕಾಗಿರತಕ್ಕದ್ದು. ತಾವೇನು ಇವತ್ತು ನೀರಿಗೋಸ್ಕರ 450 ಕೋಟಿ ರೂಪಾಯಿ ಇಡುತ್ತಿದ್ದೀರಿ. ಈ 450 ಕೋಟಿ ರೂಪಾಯಿನಲ್ಲಿ ಈ ವರ್ಷ ಎರಡು ಹಂತದಲ್ಲಿ 2,000 ಬಾವಿಗಳನ್ನು ಕಟ್ಟಿಸುತ್ತೇನೆ ಎಂದು ತಾವೇನು ಹೇಳುತ್ತಿದ್ದೀರಿ ಅದಕ್ಕಿಂತ ಮುಂಚಿತವಾಗಿ ಎಂಟು ಹತ್ತು ವರ್ಷಗಳಿಂದ ಬಾಕಿ ಇರತಕ್ಕಂಥ ಎಲ್ಲಾ ನೀರಿನ ವ್ಯವಸ್ಥೆಯನ್ನು ಸರಿಪಡಿಸಿ ಇಡೀ ರಾಜ್ಯದಲ್ಲಿ ನಂತರ ಉಳಿದಂತಹ ಹಣದಲ್ಲಿ ತಾವು ಎಷ್ಟು ಸಾವಿರ ಬಾವಿ ಬೇಕಾದರೂ ಕಟ್ಟಿಸಬಹುದು. ಇವತ್ತು ಐದು, ಆರು, ಏಳೆಂಟು ವರ್ಷಗಳಿಂದ ಬಾವಿಗಳು ಬಾಕಿ ಇದೆ. ಟ್ಯಾಂಕ್ ಆಗಿದೆ, ನೀರು ಬರಲಿಲ್ಲ. ಟ್ಯಾಂಕ್‌ಗೆ ಬೇಕಾದಂತಹ ಪೈಪ್‌ಲೈನ್ ಎಲ್ಲಾ ಆಗಿದ್ದರೂ ಕೂಡ ಇವತ್ತೂ ವಾಟರ್ ಸೋರ್ಸಸ್ ಹುಡುಕುತ್ತಿದ್ದಾರೆ. ಈ ತರಹ ಅನೇಕ ಇವೆ. ನನ್ನ ಕ್ಷೇತ್ರದಲ್ಲಿಯೇ ಹಲವಾರು ಇದೆ, ಬೇರೆ ಕ್ಷೇತ್ರದಲ್ಲಿ ಎಷ್ಟು ಇದೆಯೋ ಗೊತ್ತಿಲ್ಲ. ಇದನ್ನೆಲ್ಲಾ ಮೊದಲು ತಾವೊಂದು ಸಾರಿ ಸರ್ವೆ ಮಾಡಿ ಗಮನಕ್ಕೆ ತಂದು ಅದರ ರಿಪೇರಿ ಕೆಲಸವನ್ನು ಮೊದಲು ಕೈಗೊಂಡು ನಂತರ ಮುಂದೆ ಹೋಗತಕ್ಕಂಥ ಭಾರಿ ಸೂಕ್ತ ಎಂದು ನನ್ನ ಅನಿಸಿಕೆ. ರಸ್ತೆ ಮತ್ತು ಶಾಲಾ ಕಟ್ಟಡಗಳು ಇರಬಹುದು. ಅಂಗನವಾಡಿ ಕಟ್ಟಡಗಳು ಇರಬಹುದು. ನಾವೆಲ್ಲ ಓದಿದಂತಹ ಶಾಲೆ ಇವತ್ತೂ ಇದೆ. ನನ್ನ ಕ್ಷೇತ್ರದಲ್ಲಿ ಎರಡು ಶಾಲೆಗಳಿವೆ ಒಂದು ಶಾಲೆ ಮತ್ತೊಂದು ತಾಲ್ಲೂಕು ಪಂಚಾಯತಿ, ತಾಲ್ಲೂಕು ಆಫೀಸ್ ನಡೆಯುತ್ತಿರತಕ್ಕಂಥಹ ಕಟ್ಟಡಗಳಿಗೆ 125 ವರ್ಷಗಳು ಆಯಿತು ಎಂದು ಹೇಳಿ ಅದರ ಹುಟ್ಟು ಹಬ್ಬದ ದಿನಾಚರಣೆಯನ್ನು ನಾವು ಆಚರಿಸಿದೆವು. ಅಂದರೆ 125 ವರ್ಷ ಬಾಳತಕ್ಕಂತ ಕಟ್ಟಡವನ್ನು ಕಟ್ಟತಕ್ಕ ಜನರು ನಮ್ಮವರೇ ಇದ್ದರು. ಆದರೆ ಇವತ್ತು ಕಟ್ಟಿದಂತಹ ಕಟ್ಟಗಳು ಒಳಗೆ ಪ್ರವೇಶ ಮಾಡುವುದಕ್ಕೆ ಮೊದಲೇ ಬಿದ್ದು ಹೋಗುತ್ತವೆ. ಅದೆಲ್ಲಾ ತಮ್ಮ ಇತಿಮಿತಿಯಲ್ಲಿ ಬರುತ್ತದೆ. ತಾಲ್ಲೂಕು ಪಂಚಾಯತಿ ಮತ್ತು

ಜಿಲ್ಲಾ ಪಂಚಾಯತಿಯ ಇತಿಮಿತಿಯೊಳಗೆ ಬರುತ್ತಿರತಕ್ಕಂಥ ಕಟ್ಟಡಗಳಲ್ಲಿ ಕೆಲಸ ತೀರಾ ಕಳಪೆ ಆಗಿದೆ. ಊರಿಗೆ ಶಾಲೆ ಕಟ್ಟಬೇಕು ಬೇರೆ ಊರಿಗೆ ಹೋಗಲು ನಮ್ಮಲ್ಲಿ ಸಾಧ್ಯವೇ ಇಲ್ಲ. ಅಂದ ಮೇಲೆ ಈ ಎಲ್ಲಾ ಕೆಲಸಗಳ ಬಗ್ಗೆ ತಾವೇನು ಅಂದರೆ ಸರ್ಕಾರ ಹಣ ವಿನಿಯೋಗ ಮಾಡುತ್ತಿದ್ದೀರಿ. ಈ ಎಲ್ಲಾ ಕೆಲಸಗಳ ಜವಾಬ್ದಾರಿಕೆಯನ್ನು ತೆಗೆದುಕೊಳ್ಳತಕ್ಕಂಥ ಮೇಲುಸ್ತುವಾರಿಯನ್ನು ನೋಡತಕ್ಕಂಥ ಒಂದು ವ್ಯವಸ್ಥೆ ಆಗಬೇಕು. ಅಂದರೆ ಕುಡಿಯುವ ನೀರಿನ ವಿಚಾರದ ಬಗ್ಗೆ ನಾನು ಅನೇಕ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೇನೆ. ರಿಪೇರಿ ಬಾಬ್ತು, ಬೋರ್‌ವೆಲ್ ಕೆಟ್ಟು ಹೋಯಿತು ಎಂದರೆ ತಕ್ಷಣ ರಿಪೇರಿ ಮಾಡತಕ್ಕಂಥಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಜಿಲ್ಲಾ ಪಂಚಾಯತಿಗೆ ಕೊಟ್ಟಿದ್ದೇವೆ, ತಾಲ್ಲೂಕು ಪಂಚಾಯತಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತೇವೆ. ಇಲ್ಲಿ ಎಲ್ಲೂ ಸಮರ್ಪಕವಾಗಿ ಕೆಲಸ ಆಗುತ್ತಿಲ್ಲ. ಕಾರಣ ಅವರಿಗೆ ಇರತಕ್ಕ ಹಲವಾರು ತೊಂದರೆಗಳು. ಇದಕ್ಕೆ ಬದಲಿ ವ್ಯವಸ್ಥೆ ಆಗಲೇಬೇಕು. ನಮಗೆ ಯಾವ ರೀತಿ ಬೆಂಕಿ ನಿರೋಧಕ ಇದೆ, ಆ ರೀತಿ ಎಲ್ಲಾ ತಾಲ್ಲೂಕಿನಲ್ಲೂ ಒಂದು ವ್ಯವಸ್ಥೆ ಇರಬೇಕು. ಅವನ ಹತ್ತಿರ ಎಲ್ಲಾ ಸಾಮಾನುಗಳೂ ಇರಬೇಕು. ಬೋರ್‌ವೆಲ್ ರಿಪೇರಿಗೆ ಬೇಕಾದಂತಹ ಸಾಮಾನುಗಳು, ಸ್ವೇರ್ ಮೋಟಾರ್‌ಗಳು, ವೆಹಿಕಲ್ ರೆಡಿ ಇದ್ದು ಎಲ್ಲೋ ಒಂದು ಕಡೆ ರಿಪೇರಿಗೆ ಬಂತು ಎಂದರೆ ಕೊನೆಯ ಪಕ್ಷ ಎರಡು ದಿವಸದೊಳಗಾದರೂ ರಿಪೇರಿ ಆಗತಕ್ಕಂಥ ವ್ಯವಸ್ಥೆ ಆಗಬೇಕು. ಎರಡು ತಿಂಗಳು, ಮೂರು ತಿಂಗಳಾದರೂ ಆಗುವುದಿಲ್ಲ. ನನ್ನದೇ ಒಂದು ಬಾವಿ. ನನ್ನ ಮನೆ ಪಕ್ಕದಲ್ಲಿರತಕ್ಕಂಥ ಬಾವಿ, ಕೆಟ್ಟು ಹೋಗಿ ಒಂದೂವರೆ ತಿಂಗಳಾಯಿತು. ನಾನೊಬ್ಬ ಶಾಸಕನಾಗಿ ಹೇಳುತ್ತಲೇ ಇದ್ದೇನೆ. ಹೇಳಿ ಕೊಳ್ಳುವುದಕ್ಕೆ ನಾಚಿಕೆ ಆಗುತ್ತದೆ. ಇಲ್ಲಿ ರಿಪೇರಿ ಆಗುವುದಿಲ್ಲ ; ಅವರ ಹತ್ತಿರ ವ್ಯವಸ್ಥೆ ಇಲ್ಲಯ ಯಾವುದೋ ಒಂದು ಹಳೆಯ ಲಾರಿ ಇದೆ. ಅದು ಬಂದರೆ ನಮಗೇ ಸಂಕಟ. ಮತ್ತೆ ಸ್ಟಾರ್ಟ್ ಮಾಡಿ ಕಳಿಸ ಬೇಕಾಗುತ್ತದೆ. ಇದು ಆಗುವುದಿಲ್ಲ. ಸರಿಯಾದಂತಹ ವ್ಯವಸ್ಥೆ ಆಗಬೇಕು. ಇವತ್ತು ಫೈರ್ ಬ್ರಿಗೇಡ್‌ನವರಿಗೆ ಕೆಲಸವೇ ಇಲ್ಲ. ಏನೇನೂ ಕೆಲಸ ಇಲ್ಲ. ಅವರಿಗೆ ಕೆಲಸ ಬರುವುದು ಬೆಂಕಿ ಬಿದ್ದಾಗ ಮಾತ್ರ. ಅಲ್ಲಿಯವರೆಗೆ ಅವರು ಅಲರ್ಟ್ ಆಗಿಯೇ ಇರಬೇಕಲ್ಲ. ಯಾವತ್ತು ಬೆಂಕಿ ಬೀಳುತ್ತದೋ ಗೊತ್ತಿಲ್ಲ. ಹಾಗೆ ಈ ಪಂಪು ರಿಪೇರಿ ಮಾಡತಕ್ಕಂಥ ವ್ಯವಸ್ಥೆಗೆ ತಾವು ಖರ್ಚು ಮಾಡತಕ್ಕಂಥ ಹಂತದಲ್ಲಿ ಏನಾದರೂ ಒಂದು ಸರಿಯಾದಂತಹ ಒಂದು ವ್ಯವಸ್ಥೆಯನ್ನು ಮಾಡದೇ ಇದ್ದರೆ, ನೀವು ಕುಡಿಯುವ ನೀರಿಗೆ ಎಷ್ಟು ವ್ಯವಸ್ಥೆ ಮಾಡುತ್ತೇವೆಂದು ಹೇಳಿದರೂ ಅದು ಸಾಧ್ಯವಾಗುವುದಿಲ್ಲ. ನಂತರ ಮಲೆನಾಡು ಏರಿಯಾದಲ್ಲಿ ಬಹುತೇಕ ನನ್ನ ಕ್ಷೇತ್ರದಲ್ಲಿ ಚಿಕ್ಕಮಗಳೂರಿನಲ್ಲಿ, ಶಿವಮೊಗ್ಗದಲ್ಲಿ ಹರಿದು ಬರತಕ್ಕಂಥಹ ನೀರು ಇದೆ. ಮೇಲ್ಮಟ್ಟದಲ್ಲಿ ನೀರು ಹರಿದು ಬರುತ್ತದೆ. 320 ದಿವಸವೂ ನೀರು ಹೋಗುತ್ತದೆ. ಹೆಚ್ಚು ಖರ್ಚು ಇಲ್ಲದೇ ಹೋಗುತ್ತದೆ. ಅಲ್ಲಿಗೆ ಬರೇ ಪೈಪ್ ಹಾಕಿಕೊಂಡು ಹರಿದು ಬರತಕ್ಕಂಥ ನೀರನ್ನು ಅನೇಕರು ತಮ್ಮ ಸ್ವಂತಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅದನ್ನು ಸ್ವಲ್ಪ ಲಾರ್ಜ್ ಸ್ಕೇಲ್‌ನಲ್ಲಿ ಮಾಡಿದರೆ ಅನೇಕ ಹಳ್ಳಿಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬಹುದು. ಇದರ ಕಡೆಗೆ ಸರ್ಕಾರ ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಮ್ಮೆ ನಾನು ತಮ್ಮನ್ನು ಕೇಳುತ್ತಿದ್ದೇನೆ. ತಾವು ಇಲ್ಲಿ ಸದನದಲ್ಲಿ ಉತ್ತರವನ್ನು ಕೊಟ್ಟ ನಂತರ 28ನೇ ತಾರೀಖು ಗೆಜೆಟ್‌ನಲ್ಲಿ ಮತ್ತೊಂದು ನೋಟಿಫಿಕೇಶನ್ ಮಾಡಿ ಎಲ್ಲಾ ಕ್ಷೇತ್ರದ ಅಭ್ಯರ್ಥಿಗಳನ್ನು ಬದಲಾಯಿಸಿದ್ದಾರೆ. ತಾವು ಅವತ್ತು ಒಂದು ಮಾತನ್ನು ಹೇಳಿದಿರಿ. ಜನರಲ್ ಸೀಟನ್ನು ಬದ ಲಾಯಿಸುವುದಕ್ಕೆ ವ್ಯವಸ್ಥೆ ಇದೆ. ನಾವು ಅದನ್ನು ಮಾತ್ರ ಬದಲಾವಣೆ ಮಾಡುತ್ತೇವೆ, ಬೇರೆ ಮಾಡು ವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ. ಬಿಸಿಎಂ- ಎ ಮಾಡಿದ್ದಾರೆ, ಬಿಸಿಎಂ-ಬಿ ಮಾಡಿದ್ದಾರೆ, ಲೇಡಿ ಇದ್ದದನ್ನು ಜೆಂಟ್ಸ್ ಮಾಡಿದ್ದಾರೆ. ಜೆಂಟ್ಸ್ ಇದ್ದದ್ದನ್ನು ಲೇಡಿ ಮಾಡಿದ್ದಾರೆ. ಇದೆಲ್ಲಾ ನಡೆದಿದೆ. ಇದೆಲ್ಲ ತಮ್ಮ ಗಮನಕ್ಕೆ

ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಪ್ರಾಮಾಣಿಕವಾಗಿ ನಡೆದಿರತಕ್ಕಂಥದ್ದು. 28ನೇ ತಾರೀಖಿನ ಗೆಜೆಟ್ ತರಿಸಿ ನೋಡಿ. ಡೆಪ್ಯೂಟಿ ಕಮೀಷನರ್ ಅವರು ಕೊಟ್ಟಿರತಕ್ಕಂಥ ಲಿಸ್ಟ್ ಮಧ್ಯೆ ನಾಲ್ಕಾರು ಬಾರಿ ಬದಲಾಯಿತಲ್ಲ. ಏಕೆ ಬದಲಾಯಿತು? ಸರ್ಕಾರದ ಗಮನಕ್ಕೆ ಬಾರದೇ ಇದು ಬದಲಾಗುವುದಾದರೆ ಏನು ನಾವು ನೀರಿಕ್ಷಣೆ ಮಾಡುತ್ತಿದ್ದೇವೆ, ಯಾರದೋ ಕೈವಾಡ ಇದೆ ಎಂದು ನಾವೇನು ಹೇಳುತ್ತೇವೆ? ಅದು ಸತ್ಯ ಎಂದು ಅನಿಸುತ್ತದೆ ಅಲ್ಲವೋ? ತಾವು ಮೊನ್ನೆ 24ರಲ್ಲಿ ಇನ್ನು ಬದಲಾವಣೆ ಆಗುವುದಿಲ್ಲ ಎಂದು ಹೇಳಿದಿರಿ. 24ರ ಲಿಸ್ಟ್ 28ನೇ ತಾರೀಖು ಬದಲಾವಣೆ ಆಯಿತಲ್ಲ. ಹೇಗೆ ಬದಲಾಯಿತು? ಇದರ ಬಗ್ಗೆ ತಾವು ಗಮನ ಹರಿಸಬೇಕಾಗುತ್ತದೆ. ಇತ್ತ ಕಡೆಗೆ ಗಮನ ಹರಿಸಿ ಎಂದು ಹೇಳುತ್ತಾ ಮತ್ತೆ ನಾನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ. ತಾವೇ ಮಾಡಿದಂತಹ ಕಾನೂನು, ಜಿಲ್ಲಾ ಅಧಿಕಾರಿಗಳು ಈ ಹೆಸರುಗಳನ್ನು ಸೆಲೆಕ್ಟ್ ಮಾಡಬೇಕೆಂದು ತಾವೇನು ಎಲೆಕ್ಷನ್ ಕಮೀಷನ್ ಅವರಿಂದ ತೆಗೆದುಕೊಂಡು ಕೊಟ್ಟಿರಿ, ಅದರ ಪ್ರಕಾರ ತಾವು ಚುನಾವಣೆ ನಡೆಸಿ. ಯಾವುದೇ ರೀತಿಯ ಕೆಟ್ಟ ಹೆಸರು ತಮಗೆ ಬರುವುದಿಲ್ಲ. ತಾವೇನು ಉದ್ದೇಶ ಇಟ್ಟುಕೊಂಡು ಮಾಡಿದಿರಿ ಅದು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

+ಶ್ರೀಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮಸಭೆಗಳನ್ನು ಪರಿಣಾಮಕಾರಿಯಾಗಿ ಮಾಡಬೇಕು ಎಂಬ ಇಚ್ಛೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ವ್ಯಕ್ತಪಡಿಸಿದ್ದಾರೆ. ಇತ್ತೀಚಿನ ದಿವಸಗಳಲ್ಲಿ ಗ್ರಾಮ ಸಭೆಗಳು ಮೌಲ್ಯಗಳನ್ನು ಕಳೆದುಕೊಂಡಿವೆ. ಗ್ರಾಮಸಭೆಗಳನ್ನು ಪರಿಣಾಮಕಾರಿಯಾಗಿ ಮಾಡುವಲ್ಲಿ, ಗ್ರಾಮಸಭೆಗಳನ್ನು ಕರೆಯುವಾಗ ಜಿಲ್ಲಾಮಟ್ಟದ, ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸದೆ ಗ್ರಾಮಸಭೆಗಳಲ್ಲಿ ನಾವು ಏನು ನಿರ್ಣಯಗಳನ್ನು ಮಾಡುತ್ತೇವೆ ಅವುಗಳು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಬದಲಾವಣೆಯಾದಂಥ ಅನೇಕ ಉದಾಹರಣೆಗಳು ಇದೆ. ಇದು ಆಗಬಾರದು. ಫಲಾನುಭವಿಗಳ ಆಯ್ಕೆ ಏನು ಗ್ರಾಮಸಭೆಗಳಲ್ಲಿ ಆಗುತ್ತದೆ ಅದು ಸಹ ತಾಲ್ಲೂಕು ಮಟ್ಟಕ್ಕೆ ಜಿಲ್ಲಾಮಟ್ಟಕ್ಕೆ ಬಂದಾಗ ಬದಲಾವಣೆಯಾದಂಥ ಉದಾಹರಣೆಗಳನ್ನು ಇತ್ತೀಚಿನ ದಿವಸಗಳಲ್ಲಿ ಕಾಣುತ್ತಿದ್ದೇವೆ. ಇದನ್ನು ಸಂಪೂರ್ಣವಾಗಿ ನಿಗ್ರಹಿಸುವಂಥ ಕೆಲಸವಾಗಬೇಕು. ಗ್ರಾಮಸಭೆಗಳನ್ನು ಕರೆಯುವಾಗ ಮಳೆಗಾಲದ ಸಮಯದಲ್ಲಿ ಕರೆಯಲು ಆಗುವುದಿಲ್ಲ. ಕೆಲವರು ಉಳುವುದಕ್ಕೆ ಹೋಗುತ್ತಾರೆ. ತೀವ್ರವಾಗಿ ಮಳೆ ಬರುವುದರಿಂದ ಬಹಳಷ್ಟು ಗ್ರಾಮಸಭೆಗಳು ಈ ಅವಧಿಯಲ್ಲಿ ಯಶಸ್ವಿಯಾಗುವುದಿಲ್ಲ. ಆದ್ದರಿಂದ ಗ್ರಾಮಸಭೆಗಳನ್ನು ಆಗಸ್ಟ್, ಸೆಪ್ಟಂಬರ್‌ನಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ. ಆ ರೀತಿ ಗ್ರಾಮ ಸಭೆಗಳನ್ನು ಕರೆಯುವಾಗ ಚುನಾಯಿತ ಪ್ರತಿನಿಧಿಗಳು ಮತ್ತು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಪಾಲುಗೊಳ್ಳಬೇಕು. ನಾನು ಅಲ್ಲಿ ಹೋಗಿದ್ದೆ, ಇಲ್ಲಿ ಹೋಗಿದ್ದೆ ಸಭೆಗೆ ಬರಲು ಆಗಿಲಿಲ್ಲವೆಂದು ಯಾವುದೋ ಕಾರಣವನ್ನು ಕೊಡಬಾರದು. ಕಳೆದ ವರ್ಷದ ಅನೇಕ ಗ್ರಾಮಸಭೆಗಳಲ್ಲಿ ಭಾಗವಹಿಸಿದಾಗ ತಾಲ್ಲೂಕು ಜಿಲ್ಲಾಮಟ್ಟದ ಅಧಿಕಾರಿಗಳು ಪಾಲುಗೊಳ್ಳುವುದೇ ಇಲ್ಲ. ಏನೋ ನಾಮಕಾವಸ್ಥೆಗೆ ಎರಡು ಮೂರು ಇಲಾಖೆಯ ಅಧಿಕಾರಿಗಳು ಬರುತ್ತಾರೆ, ಏನೋ ಉತ್ತರವನ್ನು ಕೊಡುತ್ತಾರೆ, ಮೂವತ್ತು ನಿಮಿಷಗಳಲ್ಲಿ ಗ್ರಾಮಸಭೆ ಮುಗಿದುಹೋಗುತ್ತದೆ. ಆದ್ದರಿಂದ ಗ್ರಾಮಸಭೆಗಳನ್ನು ಪರಿಣಾಮಕಾರಿಯಾಗಿ ಮಾಡಲು ಕೆಲವು ಸಲಹೆಗಳನ್ನು ಕೊಟ್ಟಿದ್ದೆ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಹಳ ಮುಖ್ಯವಾದ ಅಂಶವೊಂದನ್ನು ಹೇಳಿದ್ದಾರೆ. ಕಂಪ್ಯೂಟರೀಕರಣ

ಮಾಡುವುದರಿಂದ ಭ್ರಷ್ಟಾಚಾರವನ್ನು ಗ್ರಾಮಪಂಚಾಯಿತಿ ಮಟ್ಟದಲ್ಲಿ ನಿಗ್ರಹಿಸ ಬಹುದು ಎಂದು ಹೇಳಿದ್ದಾರೆ. ಕಳೆದ ಒಂದು ವರ್ಷದ ಹಿಂದೆ ಬೆಳ್ಳಂದೂರು ಎಂಬ ಗ್ರಾಮಪಂಚಾಯಿತಿಯಲ್ಲಿ ಕಂಪ್ಯೂಟರೀಕರಣವಾಗಿದೆ. ನಾನು ಅಲ್ಲಿ ಹೋಗಿ ಎರಡು ದಿವಸ ಇದ್ದೆ. ಅಲ್ಲಿ ಏನು ವ್ಯವಸ್ಥೆಯಾಗಿದೆ ಅದನ್ನು ಬೇರೆ ಪಂಚಾಯತಿಗಳಲ್ಲಿ ಅಳವಡಿಸಲು ತಮ್ಮ ಅಧಿಕಾರಿಗಳಿಂದ ಯಾವ ಪ್ರಯತ್ನವಾಗಿದೆ? ರಾಜ್ಯದ ಎರಡನೆ ಗ್ರಾಮ ಪಂಚಾಯಿತಿಗೆ ಉಡುಪಿ ವಿಧಾನಸಭಾ ಕ್ಷೇತ್ರದ ಅಲೆಯೂರಿನಲ್ಲಿ ನಾವು ಕಂಪ್ಯೂಟರೀಕರಣ ವ್ಯವಸ್ಥೆ ಮಾಡಿದ್ದೇವೆ. ಇಡೀ ರಾಜ್ಯದಲ್ಲಿ ಪ್ರಥಮವಾಗಿ ಉಡುಪಿ ತಾಲ್ಲೂಕಿನ ಗ್ರಾಮ ಪಂಚಾಯಿತಿಯನ್ನು ಕಂಪ್ಯೂಟೀಕರಣಗೊಳಿಸಲಾಗಿದೆ. ಆದರೆ ಇದರ ಬಗ್ಗೆ ಇಲಾಖೆಯ ವತಿಯಿಂದ ಯಾವುದೇ ರೀತಿಯ ಪ್ರೋತ್ಸಾಹ ಇಲ್ಲ. ಕಂಪ್ಯೂಟರೀಕರಣವಾಗ ಬೇಕೆಂದು ನನ್ನ ಕ್ಷೇತ್ರದ 11 ಗ್ರಾಮ ಪಂಚಾಯಿತಿಗಳಲ್ಲಿ ನಾಲ್ಕು ಜನ ಅಧ್ಯಕ್ಷರನ್ನು ನಾನೇ ತರಬೇತಿಗೆ ಕಳಿಸುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದಿಂದ ಯಾವುದೇ ಬೆಂಬಲ ಸಿಗದಿದ್ದರೆ ಇವತ್ತು ನಾವೇನು ಕಂಪ್ಯೂಟರೀಕರಣದ ಬಗ್ಗೆ ಮಾತನಾಡುತ್ತಿದ್ದೇವೆ ಆದರಿಂದ ಏನು ಪ್ರಯೋಜ? ಶಾಸಕರುಗಳಿಗೆ ಕಂಪ್ಯೂಟರಿನ ಬಗ್ಗೆ ತರಬೇತಿ ಕೊಡಿಸುವುದಾಗಿ ಮಾನ್ಯ ಸಭಾಧ್ಯಕ್ಷರು ಹೇಳಿದ್ದರು. ಆದರೆ ಇವತ್ತಿನವರೆಗೆ ಆದಿಕ್ಕಿನಲ್ಲಿ ಕೆಲಸವೇ ಆಗಿಲ್ಲ.

ಅಧ್ಯಕ್ಷರು : ತರಬೇತಿ ಕೊಡಿಸುವ ಕೆಲಸ ಮಾಡೋಣ.

ಶ್ರೀ ಯು. ಆರ್. ಸಭಾಪತಿ : ತಾವು ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಕಂಪ್ಯೂಟರೀಕರಣ ಮಾಡಬೇಡಿ, ಯಾರ್ಯಾರಿಗೆ ಆಸಕ್ತಿ ಇದೆ ಆ ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಿ ಅವರಿಗೆ ಕಂಪ್ಯೂಟರನ್ನು ಕೊಂಡು ಕೊಳ್ಳಲು ಸ್ವಲ್ಪ ಅನುದಾನವನ್ನು ಕೊಡಿ. ಇದನ್ನು ಒಂದು ರೀತಿಯಲ್ಲಿ ಪ್ರಾಯೋಗಿಕವಾಗಿಯಾದರೂ ಪ್ರಾರಂಭ ಮಾಡಿ. ಇನ್ನು ವರ್ಷವರ್ಷ ಜಿಲ್ಲಾ ಪಂಚಾಯಿತಿ ರಸ್ತೆಗಳಿಗೆ ಮೇನ್ ಟೆನೆನ್ಸ್ ಗ್ರಾಂಟ್‌ನ್ನು ಕೊಡುತ್ತಿದ್ದೀರಿ. ಆ ಗ್ರಾಂಟ್ ಡ್ರಾ ಆಗುತ್ತದೆ. ಆದರೆ ರಸ್ತೆಯ ಮೈನ್‌ಟೈನ್ ಆಗುವುದಿಲ್ಲ. ಇದರ ಬಗ್ಗೆ ತಾವು ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಮಾಡಲೇಬೇಕು. ಪ್ರತಿ ವರ್ಷ ಜಿಲ್ಲಾ ಪಂಚಾಯತಿ ರಸ್ತೆಗಳು ಗುಂಡಿಬೀಳುತ್ತದೆ. ತಮ್ಮಿಂದ ಮೈನ್ ಟೆನೆನ್ಸ್ ಗ್ರಾಂಟ್ ಹೋಗುತ್ತಿದೆ, ಹಣವು ಡ್ರಾ ಆದಂಥ ಉದಾಹರಣೆ ಇದೆ, ಆದರೆ ಯಾವುದೇ ಜಿಲ್ಲಾ ಪಂಚಾಯಿತಿ ರಸ್ತೆಗಳು ದುರಸ್ತಿ ಮಾಡಿದಂಥ ಉದಾಹರಣೆಗಳಲ್ಲಿ ಮಾರ್ಚ್ ಕೊನೆಯೊಳಗೆ ಇದು ಆಗಬೇಕು. ಇದುವರೆಗೆ ಜಿಲ್ಲಾ ಪಂಚಾಯಿತಿ ರಸ್ತೆಗಳ ದುರಸ್ತಿ ಕೆಲಸವಾಗಿಲ್ಲ. ಅದಕ್ಕಾಗಿ ತಾವು ನಿಗದಿತ ಸಮಯವನ್ನು ಗೊತ್ತು ಮಾಡಿ ಮೈನ್ ಟೆನೆನ್ ಗ್ರಾಂಟನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿದ್ದಾರೋ ಇಲ್ಲವೋ ಎಂಬ ಬಗ್ಗೆ ತನಿಖೆ ಮಾಡುವುದು ಒಳ್ಳೆಯದು. ಕೋಟಿಗಟ್ಟಲೆ ಹಣವನ್ನು ಮೈನ್ ಟೆನೆನ್ಸ್ ಗ್ರಾಂಟ್‌ನಿಂದ ಲೂಟಿ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಹುಲಿಯೂರು ದುರ್ಗ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಅಳವಾದ, ವ್ಯಾಪಕವಾದ ಅನುಭವದ ಆಧಾರದ ಮೇಲೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾವು ನೀವು ಕ್ಷೇತ್ರಕ್ಕೆ ಹೋದಾಗ ಬರುವಂಥ ಸಮಸ್ಯೆಗಳಿಗೆ ಪರಿಹಾರವನ್ನು ಅವರು ಸೂಚಿಸಬೇಕೆಂದು ನನ್ನ ಪ್ರಾರ್ಥನೆ. ತಮಗೆ ಗೊತ್ತಿರುವ ಹಾಗೆ ಕುಡಿಯುವ ನೀರಿಗೆ ರಾಜ್ಯ ಸರ್ಕಾರ, ಜಿಲ್ಲಾ ಗ್ರಾಮ ಪಂಚಾಯತಿ ಅದರ ಮೇಲುಗಡೆ ವಿಶ್ವಬ್ಯಾಂಕ್‌ನ ಯೋಜನೆ, ಇಷ್ಟೊಂದು ಯೋಜನೆಗಳು ಹಳ್ಳಿಯ ಜನರಿಗೆ ಕುಡಿಯುವ ನೀರನ್ನು ಕೊಡುವ ವ್ಯವಸ್ಥೆ ಮಾಡುತ್ತಿವೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಯೋಜನೆಗಳ ಬಗ್ಗೆ ನಾವುಗಳು ಹೇಗೋ ಇಂಜಿನಿಯರ್‌ಗಳ ಹತ್ತಿರ ಮಾತನಾಡಿಕೊಳ್ಳುತ್ತೇವೆ. ಆದರೆ ವಿಶ್ವಬ್ಯಾಂಕ್‌ನ

ಯೋಜನೆಯ ಅಡಿಯಲ್ಲಿ ಕಾರ್ಯರೂಪಕ್ಕೆ ಬರುತ್ತಿರುವ ಕುಡಿಯುವ ನೀರಿನ ಯೋಜನೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಅವುಗಳು ಸಮರ್ಪಕವಾಗಿ ಕೆಲಸ ಮಾಡುವ ರೀತಿಯಲ್ಲಿ ನಾವು ಯಾರನ್ನು ಸಂಪರ್ಕ ಮಾಡಬೇಕು. ಜಿಲ್ಲೆಗೆ ಒಬ್ಬರು ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ. ಅವರನ್ನು ಕೇಳಿದರೆ ನಮಗೆ ಇದು ಸಂಬಂಧ ಪಡುವುದಿಲ್ಲ, ಕನ್‌ಸಲ್ಟೆನ್ಸಿಯನ್ನು ಕೇಳಿ ಎಂದು ಹೇಳುತ್ತಾರೆ. ಕನ್‌ಸಲ್ಟೆನ್ಸಿಯನ್ನು ಕೇಳಿದರೆ ಕೇವಲ ಬುದ್ಧಿವಾದವನ್ನು ಹೇಳುವುದು ನಮ್ಮ ಕೆಲಸ, ಕಾರ್ಯರೂಪಕ್ಕೆ ತರುವುದು ನಮ್ಮ ಕೆಲಸವಲ್ಲವೆಂದು ಹೇಳುತ್ತಾರೆ. ವಿಶ್ವಬ್ಯಾಂಕ್‌ನ ನೆರವಿನಿಂದ ಕಾರ್ಯರೂಪಕ್ಕೆ ತಂದಿರುವ ಕುಡಿಯುವ ನೀರಿನ ಯೋಜನೆಯ ಅಸಮರ್ಪಕತೆಯನ್ನು ಸರಿಮಾಡಲು ನಾವು ಯಾರನ್ನು ಸಂಪರ್ಕ ಮಾಡಬೇಕು, ಯಾರಿಗೆ ದೂರವಾಣಿ ಮಾಡಬೇಕು ಯಾರಿಗೆ ಪತ್ರವನ್ನು ಬರೆಯಬೇಕು ಎಂಬುದನ್ನು ದಯಮಾಡಿ ತಿಳಿಸಬೇಕು. ಎರಡನೆಯದಾಗಿ, ಆ ಯೋಜನೆಯನ್ನು ಯಾರು, ಎಲ್ಲಿ ಕುಳಿತುಕೊಂಡು ತಯಾರು ಮಾಡಿದರೋ ನನಗೆ ಗೊತ್ತಿಲ್ಲ, ಬಹುಶಃ ಸಮಸ್ಯೆ ಅರಿವು ಇಲ್ಲದವರಿಗೆ ಸಮಸ್ಯೆ ಬಗೆಹರಿಸಲು ಯೋಜನೆಗಳನ್ನು ತಯಾರು ಮಾಡಲು ಅವಕಾಶವನ್ನು ಕೊಟ್ಟು ಈ ದೇಶದಲ್ಲಿ ನಾವು ಹಾಳಾಗಿ ಹೋಗಿದ್ದೇವೆ ಎನ್ನುವುದಕ್ಕೆ ಇದು ಸ್ಪಷ್ಟವಾದ ಉದಾಹರಣೆ. ಈ ಯೋಜನೆಗಳನ್ನು ಪೂರ್ಣಗೊಳಿಸಿ ಗ್ರಾಮಸಮಿತಿಯವರಿಗೆ ವಹಿಸಿ ಕೊಡುವುದಂತೆ, ಗ್ರಾಮ ಸಮಿತಿಯವರು ಅದನ್ನು ನಿರ್ವಾಹಣೆ ಮಾಡಿಕೊಳ್ಳುವುದಂತೆ, ಹಾಗಿದ್ದರೆ ಹಣವನ್ನು ಕೊಡುವವರು ಯಾರು? ನಮ್ಮ ಹಳ್ಳಿಯವರೆಲ್ಲ ಕೆಟ್ಟವರು ಎಂದು ಹೇಳುವುದಿಲ್ಲ. ಹಾಕಿರುವ ಬೋರ್‌ವೆಲ್‌ಗಳಿಗೆ ಬೆಳಿಗ್ಗೆಯೊಳಗೆ ಕಲ್ಲನ್ನು ಹಾಕುತ್ತಾರೆ, ನಾವು ಹಾಕಿರುವಂಥ ಮೋಟಾರ್, ಸ್ವಾರ್ಪ್‌ನ್ನು ಬಿಚ್ಚಿಕೊಂಡು ಹೋಗುತ್ತಾರೆ. ಇಂಥ ಪರಿಸ್ಥಿತಿ ಇರುವಾಗ ಹಳ್ಳಿಯವರೇ ಸಮಿತಿ ಮಾಡಿಕೊಂಡು ಕುಡಿಯುವ ನೀರಿನ ವ್ಯವಸ್ಥೆಯ ನಿರ್ವಹಣೆ ಮಾಡುತ್ತಾರೆ ಎಂದು ನೀರಿಕ್ಷೆ ಮಾಡುವಷ್ಟು ಅಸಮರ್ಪಕವಾದ ದಡ್ಡತನದ ತಿಳಿವಳಿಕೆ ನಮ್ಮ ಆಡಳಿತಗಾರರಿಗೆ ಏಕೆ ಬಂತೋ ನನಗೆ ಗೊತ್ತಿಲ್ಲ. ಆದ್ದರಿಂದ ದಯಮಾಡಿ ಅದನ್ನು ರದ್ದು ಮಾಡಿ ಇನ್ನು ಮುಂದಾದರೂ ಸರ್ಕಾರ ತಾಲ್ಲೂಕು ಪಂಚಾಯತಿಗೋ, ಜಿಲ್ಲಾ ಪಂಚಾಯಿತಿಗೋ ವಹಿಸಿ ಕೊಡುವ ಕ್ರಮವನ್ನು ಅವರು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈಗ ನಾನು ಮಾತನಾ ಡುತ್ತೇನೆ. ಏಕೆಂದರೆ ವಿರೋಧ ಪಕ್ಷದವರು ನಾವು ಇಲ್ಲದಿದ್ದಾಗ ಯಾವುದೇ ಚರ್ಚೆ ಇಲ್ಲದೆ ಬೇಡಿಕೆ ಯನ್ನು ಪಾಸ್ ಮಾಡಿಕೊಂಡು ಹೋದರು ಎಂಬ ಆಪಾದನೆ ಬಾರದಿರಲಿ. ಆದ್ದರಿಂದ ನನಗೆ ಮಾತನಾ ಡಲು ಇನ್ನು ಸ್ವಲ್ಪ ಅವಕಾಶ ಕೊಡಿ. ಮಾನ್ಯ ಸಚಿವರು ಮೊನ್ನೆ ಉತ್ತರವನ್ನು ಕೊಡುತ್ತ ಐದು ಅಂಶಗಳ ಬಗ್ಗೆ ಹೇಳಿದರು. ಅವರು ಯಾರ ಜೊತೆಯು ಮಾತನಾಡುವುದಿಲ್ಲ, ನಮ್ಮ ಮಾತು ಕೇಳಲಿ ಲ್ಲವೆಂಬ ಆಪಾದನೆ ಏನೇ ಇದ್ದರೂ ಸಹ, ಅವರಿಗೆ ಇರುವ ಅನುಭವದ ಹಿನ್ನೆಲೆಯಲ್ಲಿ ರಾಷ್ಟ್ರದಲ್ಲಿ ಬಂದಿರುವ ನೀರಿನ ಗಂಭೀರ ಸಮಸ್ಯೆ ಏನಿದೆ ಅದರ ಬಗ್ಗೆ ಐದು ಪರಿಹಾರ ಕಾರ್ಯಕ್ರಮಗಳನ್ನು ಅವರು ಸೂಚಿಸಿ ದ್ದಾರೆ. ಅವರು ಹೇಳಿದ್ದು ನಿಜ. ನಮಗೆ ಲಭ್ಯವಾಗಿರುವ ನೀರು ಎಷ್ಟು? ಯಾವುದೋ ಕಾಲದಲ್ಲಿ ಲಭ್ಯವಿರುವ ನೀರಿನ ಬಗ್ಗೆ ಸರ್ವೆ ಮಾಡಿ ಇಟ್ಟಿದ್ದಾರೆ. ಯಾವಾಗ ಮಾಡಿದ್ದಾರೆ ಎಂಬುದು ನನಗೆ ಗೂತ್ತಿಲ್ಲ. 55 ಲಕ್ಷ ಎಕರೆಗೆ ಆಗುವಷ್ಟು ಎಂದು ಹಿಂದೆ ಸರ್ವೆ ಮಾಡಿದ್ದಾರೆ. ಮಾನ್ಯ ಸಚಿವರು ಇದನ್ನು ಮತ್ತೆ ಹೊಸದಾಗಿ ಸರ್ವೆ ಮಾಡಬೇಕು ಎಂದು ಹೇಳುತ್ತಾರೆ. ಅವರ ಮಾತನ್ನು ನಾನು ಸಂಪೂ ರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇವತ್ತು ನಮಗೆ ಲಭ್ಯವಿರುವ ನೀರು ಎಷ್ಟು ಎಂಬುದು ಗೊತ್ತಾಗಬೇಕಾ ಗುತ್ತದೆ. ಅಂತರ್ಜಲದ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ರೀ ಮೆಷರ್‌ಮೆಂಟ್ ಆಗುವು ದರ ಬಗ್ಗೆ, ಅದನ್ನು ಶೇಖರಿಸುವುದರ ಬಗ್ಗೆ, ಇರತಕ್ಕ ನೀರನ್ನು ಬಳಕೆ ಮಾಡುವುದರ ಬಗ್ಗೆ ಮತ್ತು ಇರುವ ನೀರನ್ನು ಉಳಿಸಿಕೊಳ್ಳುವುದರ ಬಗ್ಗೆ ಅವರು ಈ ಐದು ಪರಿಹಾರ

ಕಾರ್ಯಕ್ರಮಗಳ ಬಗ್ಗೆ ಸಲಹೆ ಮಾಡಿದ್ದಾರೆ. ಈ ಐದು ಪರಿಹಾರ ಕಾರ್ಯವನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಯಾವುದಾದರೂ ನಿರ್ದಿಷ್ಟವಾದ ಯೋಜನೆಗಳನ್ನು ಹಾಕಿ ಕೊಂಡಿದೆಯೆ? ಹಾಕಿಕೊಳ್ಳದಿದ್ದರೆ ಇದು ಬಹಳ ತಡವಾಯಿತು. ಗುಜರಾತ್, ಮಧ್ಯಪ್ರದೇಶ, ಸವಣೂರಿನಲ್ಲಿ ಏನು ನೀರಿಗೆ ಹಾಹಾಕಾರವಾಗುತ್ತಿದೆ ಅದು ಬಹುಶಃ ಕರ್ನಾಟಕ ರಾಜ್ಯದಲ್ಲಿ ಮುಂಬರುವ ದಿವಸಗಳಲ್ಲಿ ವ್ಯಾಪಕವಾಗಿ ಆಗುತ್ತದೆ. ಆದ್ದರಿಂದ ಈ ದಿಸೆಯಲ್ಲಿ ಏನು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು. ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಯಾವಾಗ ಸದನದಲ್ಲಿ ಇಲ್ಲ. ಕಂದಾಯ ಇಲಾಖೆಯಲ್ಲಿ ಜಮಾಬಂದಿ ಮಾಡಿ ಅವರು ಮಾಡಿದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ ಎಂಬುದನ್ನು ತಿಳಿಸಬೇಕು.

12.20 ಪಿ.ಎಂ.

ಮಾನ್ಯ ಮಂತ್ರಿಗಳು ಗ್ರಾಮ ಪಂಚಾಯಿತಿಯ ಹಂತದಲ್ಲಿ 'ಜಮಾ ಬಂದಿ' ಮಾಡುತ್ತೇವೆ ಎಂದು ಹೇಳಿದರು. ಮಾನ್ಯ ಕಂದಾಯ ಮಂತ್ರಿಗಳು ಈಗ ಸಾಧನೆ ನಮ್ಮ ಗಮನದಲ್ಲಿದೆ. ಈ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳ ಜಮಾಬಂದಿಯ ಪರಿಕಲ್ಪನೆ ಅಥವಾ ಕಲ್ಪನೆ ಅಥವಾ ಅದರ ಸ್ವರೂಪ ಎಂತಹದ್ದು ಎಂಬ ಬಗ್ಗೆ ಸ್ವಲ್ಪ ವ್ಯಾಪಕವಾಗಿಸದನಕ್ಕೆ ಅವರು ತಿಳಿಸಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೂರನೆಯದಾಗಿ, ಮಾನ್ಯ ಸದಸ್ಯರಾದ ಶಿವಪ್ಪನವರು ಹೇಳಿದಂತೆ ಸ್ವಚ್ಛ ಗ್ರಾಮದ ಕಲ್ಪನೆ ಅತ್ಯಂತ ಸುಂದರವಾದುದು. ಆ ಹೆಸರೂ ಕೂಡ ಚೆನ್ನಾಗಿದೆ, ಆ ಕಲ್ಪನೆಯೂ ಕೂಡ ಚೆನ್ನಾಗಿದೆ. ಅದು ಜಾರಿಗೆ ಬರಬೇಕೆಂಬ ಆಸೆಯೂ ಕೂಡ ನಮ್ಮದಾಗಿದೆ. ಆದರೆ ನೀರು ಇಲ್ಲದ ಕಕ್ಕಸ್ಸು ಅಂದರೆ ಅದು ನರಕವೇ ಸರಿ. ನಾನು ನಮ್ಮಲ್ಲಿ ಇರುವವೆಲ್ಲವನ್ನೂ ಕೂಡ ಒಡೆಸಿ ಹಾಕಿದ್ದೇನೆ. ಎಲ್ಲಿ ನೀರು ಸೌಲಭ್ಯ ಸಮರ್ಪಕವಾಗಿ ಇರುವು ದಿಲ್ಲವೋ ಅಂತಹ ಕಡೆಗಳಲ್ಲಿ ಕಕ್ಕಸ್ಸುಗಳನ್ನು ಕಟ್ಟಿಸುವು ದು ಬೇಡ. ನೀರು ಇಲ್ಲದೇ ದುರ್ವಾಸನೆ ಅನುಭವಿಸುವುದಕ್ಕಿಂತಲೂ ಅವುಗಳನ್ನು ಕಟ್ಟಿಸದೇ ಇರುವುದು ಬಹಳ ಉತ್ತಮವಾದುದು. ಎಲ್ಲಿ ನೀರು ಸಂಪೂರ್ಣವಾಗಿ ಲಭ್ಯವಿದೆಯೋ ಅಂತಹ ಕಡೆ ಮಾತ್ರ ಅವುಗಳನ್ನು ಕಟ್ಟಿಸಿ ಎಂದು ಕೋರುತ್ತೇನೆ. ಹೀಗಾದರೆ ಮಾತ್ರ ಸ್ವಚ್ಛ ಗ್ರಾಮದ ತಮ್ಮ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಲಿಕ್ಕೆ ಸಾಧ್ಯವಾಗುತ್ತದೆ. ನೀರು ಇಲ್ಲದ ಕಡೆ ಅವುಗಳನ್ನು ಕಟ್ಟುವುದು ಬೇಡ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿ ಕೊಳ್ಳಲಿಕ್ಕೆ ಇಷ್ಟ ಪಡುತ್ತೇನೆ. We don't want to live in utopia. ಇನ್ನು ಮಾನ್ಯ ಸಚಿವರು ಚೆಕ್ ಗಳ ಬಗ್ಗೆ ಹೇಳಿದ್ದಾರೆ. ನಮ್ಮ ಬಹಳಷ್ಟು ಜನ ಇ.ಓಗಳಿಗೆ ಯಾವ ಯಾವ ಕಡೆಗಳಲ್ಲಿ ಯಾವ್ಯಾವ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಅಕೌಂಟ್‌ಗಳಿವೆ, ಅವುಗಳಲ್ಲಿ ಎಷ್ಟೆಷ್ಟು ಹಣ ಇದೆ ಎಂಬುದೇ ಗೊತ್ತಿರುವು ದಿಲ್ಲ. ಈ ದಿಸೆಯಲ್ಲಿ ನಾನು ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ತಾಲ್ಲೂಕು ಪಂಚಾಯಿತಿಯಲ್ಲಿ ಇರುವಂತಹ ಎಲ್ಲಾ ಹಣವನ್ನೂ ಕೂಡ ಒಂದೇ ಬ್ಯಾಂಕಿನ ಒಂದೇ ಅಕೌಂಟ್‌ನಲ್ಲಿಟ್ಟುಕೊಂಡು ಆಪರೇಟ್ ಮಾಡಲಿಕ್ಕೆ ಏನು ತೊಂದರೆ ಇದೆ? ಆ ಊರಿನಲ್ಲಿ ಎಷ್ಟೆಷ್ಟು ಬ್ಯಾಂಕ್‌ಗಳಿರುತ್ತವೆಯೋ ಅಷ್ಟೂ ಬ್ಯಾಂಕ್‌ಗಳಲ್ಲಿ ಈಗ ದುಡ್ಡನ್ನು ಇಡಲಾಗುತ್ತಿದೆ. ಈಗ ಯಾರಾದರೂ ಒಬ್ಬ ಇ.ಓ. ಟ್ರಾನ್ಸ್‌ಫರ್ ಆಗಿ ಆ ಜಾಗಕ್ಕೆ ಮತ್ತೊಬ್ಬ ಇ.ಓ. ಹೊಸದಾಗಿ ಬಂದರೆ ಅವನಿಗೆ ಇರುವ ಅಕೌಂಟ್‌ಗಳನ್ನು ಕಂಡು ಹಿಡಿದು ಪಾಸ್ ಪುಸ್ತಕ ತೆಗೆದು ನೋಡಿ ಚೆಕ್‌ಗಳನ್ನು ಬರೆಯುವುದಕ್ಕೇ ಮೂರು ತಿಂಗಳು ಹಿಡಿಯತ್ತದೆ. So, I like to suggest why they cannot operate all these accounts in a single bank. ಈ ರೀತಿ ಮಾಡಲಿಕ್ಕೆ ಸಾಧ್ಯತೆ ಇದೆಯೇ?

ಸಾಧ್ಯತೆ ಇಲ್ಲದಿದ್ದರೆ ಏಕಿಲ್ಲ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ. ಕೊನೆಯದಾಗಿ, 33 ಸಾವಿರ ಕೆರೆಗಳು ತಮ್ಮ ಇಲಾಖಾ ವ್ಯಾಪ್ತಿಗೆ ಬರುತ್ತವೆ ಎಂದು ಸಚಿವರು ಹೇಳಿದ್ದಾರೆ. ನಾನು ಆಗಲೇ ಹೇಳಿದಂತೆ ಇತ್ತೀಚಿನ ದಿವಸಗಳಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ನೋಡಿದರೆ ಮುಂದಿನ ದಿನಗಳಲ್ಲಿ ಕುಡಿಯುವ ನೀರು ಇಲ್ಲದಂತಹ ಸಮಾಜವನ್ನು ಸೃಷ್ಟಿ ಮಾಡಿದ ಪಾಪದ ಅಧ್ಯಾಯಕ್ಕೆ ನಾವೆಲ್ಲರೂ ಭಾಗಸ್ಥರಾಗುತ್ತೇವೆ. ಆ ದೃಷ್ಟಿಯಿಂದ 33 ಸಾವಿರ ಕೆರೆಗಳನ್ನು ಪುನಶ್ಚೇತನಗೊಳಿಸಲಿಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ನಾವು ಕೆರೆಗಳ ಪುನಶ್ಚೇತನ ಮಾಡಿ ಭೂಮಿಯ ಮೇಲೆ ಬೀಳುವಂತಹ ಪ್ರತಿ ಹನಿ ನೀರನ್ನು ಶೇಖರಿಸುವಂತಹ ಗಂಭೀರವಾದ ಪ್ರಯತ್ನವನ್ನು ನಾವು ಮಾಡದೇ ಹೋದರೆ, ನಾನು ಆಗಲೇ ಹೇಳಿದಂತೆ ಕುಡಿಯುವ ನೀರು ಇಲ್ಲದೇ ಇರುವಂತಹ ಪಾಪದ ಅಧ್ಯಾಯದಲ್ಲಿ ನಾವೆಲ್ಲರೂ ಕೂಡ ಭಾಗಸ್ಥರಾಗುತ್ತೇವೆ. ಆದುದರಿಂದ ಸರ್ಕಾರ ಈ 33 ಸಾವಿರ ಕೆರೆ ಗಳನ್ನು ಅಭಿವೃದ್ಧಿ ಪಡಿಸುವ ಕಡೆಗೆ ಗಮನ ಹರಿಸಬೇಕು. ಕೇವಲ ಗಮನ ಹರಿಸದರೆ ಮಾತ್ರ ಸಾಕಾ ಗುವುದಿಲ್ಲ. ಈ ಕೆರೆಗಳನ್ನು ಪುನಶ್ಚೇತನಗೊಳಿಸಲಿಕ್ಕೆ ಏನಾದರೂ ಒಂದು ನಿರ್ದಿಷ್ಟವಾದಂತಹ ಕಾರ್ಯ ಕ್ರಮವನ್ನು ಮಾನ್ಯ ಸಚಿವರು ಹಮ್ಮಿಕೊಂಡಿದ್ದಾರೆಯೇ ಎಂದು ನಾನು ಕೇಳಬಯಸುತ್ತೇನೆ. ಕೊನೆಯದಾಗಿ, ನಾನು ಒಂದು ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ನಮ್ಮಲ್ಲಿ ಯೋಜನೆಗಳಿಗೆ ಕೊರತೆ ಇಲ್ಲ, ಕಾರ್ಯಕ್ರಮಗಳೂ ಕೂಡ ನಮ್ಮಲ್ಲಿ ಕಡಿಮೆ ಇಲ್ಲ. ಸಂಪನ್ಮೂಲಗಳೂ ಕೂಡ ಅಷ್ಟೊಂದು ಕಡಿಮೆ ಇಲ್ಲ. ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತಹ ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ಮಾತನ್ನು ನಾನಿಲ್ಲಿ ಹೇಳಿದರೆ ದಯಮಾಡಿ ಯಾರೂ ಕೂಡ ತಪ್ಪು ತಿಳಿದುಕೊಳ್ಳಬಾರದು. ಯಾವುದೇ ಸರ್ಕಾರ ಇವತ್ತು ಅಧಿಕಾರಿದಲ್ಲಿರಲಿ, ಆಡಳಿತ ಯಂತ್ರ ಮಾತ್ರ ಇದ್ದೇ ಇರುತ್ತದೆ. ಅಧಿಕಾರಿಗಳು ಇದ್ದೇ ಇರುತ್ತಾರೆ. ಈಗಿರುವ ಆಡಳಿತ ಯಂತ್ರ ಸಂಪೂರ್ಣ ವಾಗಿ ಕೆಟ್ಟು ಹೋಗಿದೆ, ಅದು ತುಕ್ಕು ಹಿಡಿದಿದೆ. ಆಡಳಿತವನ್ನು ಸರಿಪಡಿಸಿ ಅದನ್ನು ಚಾಲನೆ ಮಾಡಲಿಕ್ಕೆ ಮಾನ್ಯ ಮಂತ್ರಿಗಳೇನಾದರೂ ವಿಶೇಷವಾದಂತಹ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆಯೇ? ಇವತ್ತು ಆಡಳಿತ ಎಲ್ಲಾ ಹಂತಗಳಲ್ಲಿಯೂ ಕೂಡ ತುಕ್ಕು ಹಿಡಿದು ಹೊಗಿದೆ. ಎಲ್ಲೋ ಒಂದು ಸೆಟೋ ಅಥವಾ ಬೋಲ್ಟೋ ಹೋಗಿದ್ದರೆ ಅದನ್ನು ಬದಲಾಯಿಸಿ ಆಡಳಿತ ಯಂತ್ರವನ್ನು ಶುರು ಮಾಡಬಹುದಾಗಿತ್ತು. ಆದರೆ ಅಲ್ಲಿ ಅದು ತುಕ್ಕು ಹಿಡಿದು ಹೋಗಿದೆ. ತುಕ್ಕು ಹಿಡಿದಿರುವುದನ್ನು ಸೀಮೆಎಣ್ಣೆ ಅಥವಾ ಪೆಟ್ರೋಲ್‌ನಲ್ಲಿ ಇದ್ದಿ ಉಚ್ಚಿ ತೆಗೆದು ಆಡಳಿತ ಯಂತ್ರವನ್ನು ಇವತ್ತು ಶುರು ಮಾಡಬೇಕಾಗಿದೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತುಕ್ಕು ಹಿಡಿದಿರುವಂತಹ ಆಡಳಿತ ಯಂತ್ರವನ್ನು ಸಮರ್ಪಕವಾಗಿ ಕೆಲಸ ಮಾಡಲಿಕ್ಕೆ ನಿರ್ದಿಷ್ಟವಾದಂತಹ ಕಾರ್ಯಕ್ರಮಗಳೇನಾದರೂ ಇದ್ದರೆ ಆ ಬಗ್ಗೆ ನಮಗೆ ತಿಳಿಸಬೇಕು. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕರಿಯಣ್ಣ (ಹೊಳೆ ಹೊನ್ನೂರು) : ಮಾನ್ಯ ಅಧ್ಯಕ್ಷರೇ, ನಮ್ಮ ಗ್ರಾಮ ಪಂಚಾಯಿತಿ ತುಂಬಾ ದೊಡ್ಡದಾಗಿದೆ. ಪಂಚಾಯತ್ ರಾಜ್ ಇಲಾಖೆ ಅಂದಾಕ್ಷಣ ಎಲ್ಲಾ 21 ಇಲಾಖೆಗಳನ್ನೂ ಕೂಡ ಅದು ಒಳಗೊಂಡಿದೆ. ಕುಡಿಯುವ ನೀರಿನ ಸಮಸ್ಯೆ ನಮಗೆ ತುಂಬಾ ದೊಡ್ಡದುಯ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಬೋರ್‌ವೆಲ್‌ಗಳ ರಿಪೇರಿಗಾಗಿ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಆ ಬಗ್ಗೆ ಸಮ ರ್ಪಕವಾದಂತಹ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಲಿಲ್ಲ. ಗ್ರಾಮ

ಪಂಚಾಯಿತಿಯವರು ಏನು ಕೆಟ್ಟು ಹೋಗಿದೆ ಎಂಬುದನ್ನು ಹೇಳಬೇಕು. ತಾಲ್ಲೂಕು ಪಂಚಾಯಿತಿಯವರು ಬಂದು ಅದನ್ನು ರಿಪೇರಿ ಮಾಡಬೇಕಂತೆ. ತಾಲ್ಲೂಕು ಪಂಚಾಯಿತಿಯವರು ಬಂದು ಪೈಪ್ ಎತ್ತಿ ಮೋಟಾರ್ ಸುಟ್ಟು ಹೋಗಿದ್ದನ್ನು ನೋಡಿ, ಏನೇನು ಸಾಮಾನುಗಳನ್ನು ತರಬೇಕು ಎಂದು ಬರೆದು ಕೊಟ್ಟ ಮೇಲೆ ಗ್ರಾಮ ಪಂಚಾಯಿತಿಯವರು ಆ ಸಾಮಾನುಗಳನ್ನು ಕೊಂಡುಕೊಳ್ಳಬೇಕು. ನಂತರ ತಾಲ್ಲೂಕು ಪಂಚಾಯಿತಿ ಅವರು ರಿಪೇರಿ ಮಾಡಬೇಕು. ಒಂದು ವೇಳೆ ಗ್ರಾಮ ಪಂಚಾಯಿತಿಯಲ್ಲಿ ದುಡ್ಡು ಇಲ್ಲದೇ ಹೋದರೆ ಆ ಗ್ರಾಮ ಪಂಚಾಯಿತಿಯ ಬೋರ್‌ವೆಲ್ ರಿಪೇರಿಯಾಗುವುದಿಲ್ಲ. ಒಂದು ವೇಳೆ ಮೋಟಾರ್ ಸುಟ್ಟು ಹೋಗಿದ್ದರೆ ಕೊಂಡುಕೊಳ್ಳುವುದಕ್ಕೆ ಅವರ ಹತ್ತಿರ ದುಡ್ಡು ಇಲ್ಲದಿದ್ದರೆ ಅವರು ನೀರನ್ನು ಸಮರ್ಪಕವಾಗಿ ಜನರಿಗೆ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಇದು ಅಸಮರ್ಪಕವಾದುದು ಎಂದು ಹೇಳುತ್ತೇನೆ. ಒಂದು ಪಕ್ಷ ಜಿಲ್ಲಾ ಪಂಚಾಯಿತಿಯಲ್ಲೇ ರಿಪೇರಿ ಮಾಡುವ ಅಧಿಕಾರಿ ಇದ್ದರೆ, ಜಿಲ್ಲಾ ಪಂಚಾಯಿತಿಯಲ್ಲಿ ಸಾಕಷ್ಟು ಹಣ ಇರುತ್ತದೆ. ಆ ಹಣದಲ್ಲಿ ರಿಪೇರಿ ಮಾಡಿಸಿಕೊಳ್ಳ ಬಹುದೇ ವಿನಃ ಇಲ್ಲದಿದ್ದರೆ ಆ ಕೆಲಸ ಆಗುವುದಿಲ್ಲ. ಇವರು ಯಾವುದೋ ಒಂದು ಲೆಕ್ಕಾಚಾರದಲ್ಲಿ ಕೇವಲ ಸ್ವಲ್ಪ ದುಡ್ಡನ್ನು ಮಾತ್ರ ಕೊಟ್ಟಿದ್ದಾರೆ. ಆದರೆ ಇತ್ತೀಚೆಗೆ ನೀರಿನ ಮಟ್ಟ 600-700 ಅಡಿಗಳಷ್ಟು ಕೆಳಕ್ಕೆ ಹೋಗಿರುವುದರಿಂದ, ಪೈಪಿಗೆ ಹೆಚ್ಚಿಗೆ ಹಣ ಖರ್ಚಾಗಬೇಕಾಗಿರುವುದರಿಂದ, ಅಷ್ಟು ಹಣವನ್ನು ಅವರು ಗ್ರಾಮ ಪಂಚಾಯಿತಿಗಳಿಗಾಗಿ ರಿಪೇರಿಗೆ ಒದಗಿಸಿಲ್ಲ. ಹಾಗಾಗಿ ರಿಪೇರಿ ಅಧಿಕಾರವನ್ನು ಜಿಲ್ಲಾ ಪಂಚಾಯಿತಿಯ ವರಿಗೇ ಕೊಡಬೇಕು. ಇದಕ್ಕೆ ಸರ್ಕಾರ ಜಿಲ್ಲಾ ಪಂಚಾಯಿತಿಯಿಂದ ಅಥವಾ ತಾಲ್ಲೂಕು ಪಂಚಾಯಿತಿ ಯಿಂದ ಹಣ ಕೊಡಬೇಕು. ರಿಪೇರಿಗೆ ಹೆಚ್ಚಿಗೆ ಹಣವನ್ನು ಒದಗಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡು ವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊ ಳ್ಳುತ್ತೇನೆ. ಮಾನ್ಯ ಸಚಿವರು ಉತ್ತರಿಸುವಾಗ ಕಟ್ಟಡಗಳ ಬಗ್ಗೆ ಏನನ್ನೂ ಸಹಾ ಹೇಳಲಿಲ್ಲ. ಈಗ ನಾವು ಶಾಲಾ ಕಟ್ಟಡಗಳನ್ನು ಕಟ್ಟಿದ್ದೇವೆ, ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿದ್ದೇವೆ, ಗ್ರಾಮ ಪಂಚಾಯಿತಿಯ ಕಟ್ಟಡಗಳನ್ನು ಕಟ್ಟಿದ್ದೇವೆ, ಹೆರಿಗೆ ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿದ್ದೇವೆ. ಆದರೆ ಯಾವ ಕಟ್ಟಡವೂ ಸಹಿತ ಸಮರ್ಪಕವಾಗಿಲ್ಲ. ಎಲ್ಲಾ ಕೂಡ ರಿಪೇರಿಯಾಗಬೇಕಾಗಿದೆ. 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಕಡೆಗೆ, ಕೇವಲ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಕಟ್ಟಡ ರಿಪೇರಿ ಮಾಡಿದರೆ, 2 ಲಕ್ಷ ರೂಪಾಯಿಗಳ ಕಟ್ಟಡವನ್ನು ಉಳಿಸಿಕೊಳ್ಳಲು ಸಾಧ್ಯ. ಆದರೆ ಕಟ್ಟಡದ ರಿಪೇರಿಗಾಗಿ ಜಿಲ್ಲಾ ಪಂಚಾಯಿತಿಯಲ್ಲಿ ಆಗಲೀ ಅಥವಾ ತಾಲ್ಲೂಕು ಪಂಚಾಯಿತಿಯಲ್ಲಿ ಆಗಲೀ ಹಣವನ್ನು ನಿಗದಿ ಮಾಡಿಲ್ಲ. ಇರತಕ್ಕಂಥ ಹಣ ಸಾಕಾಗುವುದಿಲ್ಲ. ನಾವು ಅನೇಕ ಲಕ್ಷಾಂತರ ರೂಪಾಯಿ ಬೆಳೆ ಬಾಳುವ ಕಟ್ಟಡಗಳನ್ನು ರಿಪೇರಿ ಮಾಡದೇ ಇರುವ ಸಲುವಾಗಿ ಅವುಗಳನ್ನು ಕಳೆದುಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೆ ಯಾವುದಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಸಚಿವರು ತಿಳಿಸಬೇಕು. ಜಿಲ್ಲಾ ಪಂಚಾಯಿತಿಗೆ 'ಪರ್ಚೇಸ್ ಕಮಿಟಿ' ಮೂಲಕ ಖರೀದಿಸಲು ಅಧಿಕಾರ ನೀಡಲಾಗಿದೆ. ಹಾಗೆಯೇ ತಾಲ್ಲೂಕು ಪಂಚಾಯಿತಿಯಲ್ಲೂ ಕೂಡ 'ಪರ್ಚೇಸ್ ಕಮಿಟಿ ಮೂಲಕ ಖರೀದಿಸಲು ಅಧಿಕಾರ ನೀಡಿದ್ದೇವೆ. ಆದರೆ ಅವುಗಳು ಸಕಾಲದಲ್ಲಿ ಪರ್ಚೇಸ್ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳದಿರುವುದರಿಂದ ಕುಡಿಯುವ ನೀರಿಗೂ ಕೂಡ ಅನಾನುಕೂಲವಾಗುತ್ತಿದೆ. ಔಷಧಿಗಳನ್ನು ಕೊಳ್ಳುವುದಕ್ಕೆ ಅನಾನುಕೂಲವಾಗುತ್ತಿದೆ. ಬೇರೆ ರೀತಿಯ ಕೆಲಸಗಳನ್ನೂ ಕೂಡ ಶುರು ಮಾಡಲಿಕ್ಕೆ ಇದರಿಂದ ತೊಂದರೆಯಾಗುತ್ತದೆ ಪರ್ಚೇಸ್‌ಕಮಿಟಿಯವರು ತಕ್ಷಣವೇ ಪರ್ಚೇಸ್ ಮಾಡಲಿಕ್ಕೆ

ತೀರ್ಮಾನ ತೆಗೆದುಕೊಳ್ಳದಿರುವುದರಿಂದ ಬಹಳ ಕಷ್ಟವಾಗಿದೆ. ಸದರಿ ಕಮಿಟಿಯವರು ಸುಮಾರು ಎಂಟು ತಿಂಗಳುಗಳ ಕಾಲ ತೆಗೆದುಕೊಂಡು, ಇನ್ನು ನಾಲ್ಕು ತಿಂಗಳು ಉಳಿದಿರುವಾಗ ಮಾತ್ರ ಅದನ್ನು ಅಪ್ರೂವ್ ಮಾಡುತ್ತಾರೆ. ಈ ರೀತಿ ಅವ್ಯವಸ್ಥೆಯಾಗದ ರೀತಿಯಲ್ಲಿ ಏನಾದರೂ ಕಡಿವಾಣವನ್ನು ಸರ್ಕಾರ ಹಾಕಬೇಕು. ಇಂತಿಷ್ಟು ದಿವಸಗಳಲ್ಲಿ ಪರ್ಚೇಸ್ ಕಮಿಟಿ ಅಪ್ರೂವ್ ಮಾಡಿ ಕೊಡಬೇಕು ಎಂದು ನಿಯಮವನ್ನು ಮಾಡಬೇಕು. ಇಲ್ಲದಿದ್ದರೆ ಆ ದಿಸೆಯಲ್ಲಿ ನಾವು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡು ನಾವೇ ಅದನ್ನು ಅಪ್ರೂವ್ ಮಾಡಿ ಅದಕ್ಕೆ ಆರ್ಡರ್ ಕೊಡುತ್ತೇವೆ ಎಂದು ಸರ್ಕಾರ ಹೇಳಬೇಕು. ಈ ಬಗ್ಗೆ ಮಾನ್ಯ ಸಚಿವರು ಯೋಜನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು 33 ಸಾವಿರ ಕೆರೆಗಳ ಬಗ್ಗೆ ಹೇಳಿದರು. ಈಗ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ 50 ಎಕರೆಗಿಂತ ಕಡಿಮೆ ವಿಸ್ತೀರ್ಣವುಳ್ಳ ಕೆರೆಗಳ ರಿಪೇರಿ ಕೆಲಸವನ್ನು ವಹಿಸಲಾಗಿದೆ. 50- 100 ಎಕರೆಗಳವರೆಗೆ ವಿಸ್ತೀರ್ಣ ಇರತಕ್ಕಂಥ ಕೆರೆಗಳ ರಿಪೇರಿ ಕೆಲಸವನ್ನು ಜಿಲ್ಲಾ ಪಂಚಾಯಿತಿಗಳಿಗೆ ವಹಿಸಿ ಕೊಡಲಾಗಿದೆ. ಈಗ ಆ ರೀತಿಯ ಒಂದು ನಿಯಮ ಇದೆ. ಕುಡಿಯುವ ನೀರಿನ ಗ್ರೌಂಡ್ ವಾಟರ್ ಈಗಾಗಲೇ 600- 700 ಅಡಿಗಳಷ್ಟು ಕೆಳಕ್ಕೆ ಹೋಗಿದೆ. ಈ ಕೆರೆಗಳನ್ನು ಅಥವಾ ಕಟ್ಟೆಗಳನ್ನು ನಾವು ಉಳಿಸಿಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದರೆ ಅವುಗಳ ರಿಪೇರಿಗಾಗಿ ಮತ್ತು ಸಂರಕ್ಷಣೆ ಗಾಗಿ ಈಗ ಇಟ್ಟಿರತಕ್ಕಂಥ ಹಣ ಯಾವುದಕ್ಕೂ ಕೂಡ ಸಾಕಾಗುವುದಿಲ್ಲ. ಕಡೆಯ ಪಕ್ಷ ನಾವು ಅಂತರ್ಜಲವನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕಾದರೂ ಸಹಿತ ನಿಯಮವನ್ನು ರಚನೆ ಮಾಡಬೇಕು. ಅದಕ್ಕಾಗಿ ದುಡ್ಡನ್ನು ಇಡಬೇಕಾಗುತ್ತದೆ. ಇಲ್ಲದಿದ್ದರೆ ನಮಗೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಮಾನ್ಯ ಸಚಿವರು ಏನಾದರೊಂದು ಹೊಸ ಪರಿಹಾರವನ್ನು ಸೂಚಿಸಬೇಕು. ನಮ್ಮ ಸಣ್ಣ ನೀರಾವರಿ ಮಂತ್ರಿಗಳು ಕೆರೆಗಳ ಹೂಳೆತ್ತುವುದಕ್ಕಾಗಿ ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಇದಕ್ಕೂ ಕೂಡ ಹೊಸದೊಂದು ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳದೇ ಹೋದರೆ, ಇನ್ನು ಹತ್ತು ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವುದಕ್ಕೆ ನೀರನ್ನು ಕೊಡದೇ ಇರತಕ್ಕಂಥ ಪರಿಸ್ಥಿತಿ ಮುಟ್ಟತಕ್ಕಂಥ ವಾತಾವರಣ ಕೂಡ ಸೃಷ್ಟಿಯಾಗತಕ್ಕಂಥದ್ದರಲ್ಲಿ ಅತಿಶಯೋಕ್ತಿ ಆಗಲಾರದು. ಆದರೆ ಹೆಚ್ಚಿನ ಗಮನಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲಾ ಪಂಚಾಯಿತಿ ಶುರುವಾದ ನಂತರದಲ್ಲಿ ನಾವು ನಬಾರ್ಡ್‌ನಿಂದ, ಮಲೆನಾಡು ಅಭಿವೃದ್ಧಿ ಮಂಡಳಿಯಿಂದ, ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದ ಅಥವಾ ಇನ್ನಾವುದೇ ಕಾರ್ಯಕ್ರಮಗಳ ಅಡಿಯಲ್ಲಿ ಅಥವಾ ನಮ್ಮ ಎಂ.ಪಿ. ಗ್ರಾಂಟ್‌ನಿಂದ ಅನೇಕ ರಸ್ತೆಗಳನ್ನು ಟಾರ್ ರಸ್ತೆಗಳನ್ನಾಗಿ ಮಾಡಿದ್ದೇವೆ, ಜಿಲ್ಲಾ ರಸ್ತೆಗಳನ್ನಾಗಿ ಮಾಡಿದ್ದೇವೆ. ಇದೆಲ್ಲವನ್ನೂ ಕೂಡ ಸರ್ವೆ ಮಾಡಿಸಿ ಈ ಜಿಲ್ಲೆಯಲ್ಲಿ ಇಷ್ಟು ರಸ್ತೆ ಇದೆ ಎಂಬಂತಹ ಅಂಕಿ ಅಂಶಗಳನ್ನು ಸರ್ಕಾರ ಇದುವರೆಗೂ ಕೂಡ ತರಿಸಿಕೊಂಡಿಲ್ಲ. ಆ ಮಾಹಿತಿಯನ್ನು ತರಿಸಿಕೊಳ್ಳದಿರುವುದರಿಂದ ಆ ರಸ್ತೆಗಳಿಗೆ ಮೈನ್ ಟಿನೆನ್ಸ್ ಗ್ರಾಂಟ್ ಬರುತ್ತಿಲ್ಲ. ಅದು ಬಾರದಿರುವುದರಿಂದ ಆ ರಸ್ತೆಗಳು ರಿಪೇರಿಯಾಗುತ್ತಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನಿರ್ಮಾಣ ಮಾಡಿರತಕ್ಕಂಥ ರಸ್ತೆಯಲ್ಲಿ ಇವತ್ತು ಕೇವಲ ಒಂದು ಗುಂಡಿ ಮುಚ್ಚುವಿದಕ್ಕೆ ನಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಹಣ ಇಲ್ಲದಂತಹ ಪರಿಸ್ಥಿತಿ ಇವತ್ತು ಒದಗಿದೆ. ಇದರಿಂದಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನಿರ್ಮಿಸಿರತಕ್ಕಂಥ ರಸ್ತೆಗಳನ್ನು ನಾವು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಬಂದೊ ದಗಿದೆ. ಆದರ ಬಗ್ಗೆ ಮಾನ್ಯ ಸಚಿವರು ಹೊಸ ಚಿಂತನೆಯೊಂದನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಶೌಚಾಲಯವನ್ನು ಕಟ್ಟಿಕೊಳ್ಳಬೇಕೆಂದು ಮಾಡಿರುವ ಬಗ್ಗೆ ಹೇಳಬೇಕೆಂದರೆ ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಮನೆಗಳು ಒಂದ

ಕ್ಕೊಂದು ಜಂಟಿಯಾಗಿದ್ದು ನಾವು ಕೊಟ್ಟಿರುವ 20ಎ30 ನಿವೇಶನ ಹಾಗೂ 30ಎ40 ನಿವೇಶನಗಳ ಏರಿಯಾದಲ್ಲಿ ಕನ್ಸರೆವೆನ್ಸಿ ಕೂಡ ಇಲ್ಲ ಮತ್ತು ಮುಂದೆ ಇರಬೇಕಾದ ನೂರಡಿ ರಸ್ತೆಯೂ ಕೂಡ ಇಲ್ಲದಾಗಿರುವಾಗ ಪಂಚಾಯಿತಿ ಸದಸ್ಯರಾಗಬಯಸುವವರು ಒಂದು ವರ್ಷದೊಳಗೆ ಶೌಚಾಲಯವನ್ನು ಕಟ್ಟಿಕೊಳ್ಳಬೇಕೆಂದು ಹೇಳಿದರೆ ಆತ ಯಾವ ಜಾಗದಲ್ಲಿ ಶೌಚಾಲಯ ಕಟ್ಟಿಕೊಳ್ಳಬೇಕು? ಅವನ ಮನೆಯ ಅಂಗಳದಲ್ಲಿ ಕಟ್ಟಿಕೊಳ್ಳುವುದಕ್ಕೆ ಆಗುತ್ತದೆಯೆ? ಗ್ರಾಮಾಂತರ ಪ್ರದೇಶದ ಅನುಭವ ಇರುವವರು ದಯಮಾಡಿ ಈಗ ಮಾಡಿರುವ ಕಾನೂನನ್ನು ಬದಲಾವಣೆ ಮಾಡಬೇಕಾದ ಅವಶ್ಯಕತೆ ಇದೆ. ಎಷ್ಟೋ ಎಸ್‌ಸಿ/ ಎಸ್‌ಟಿ ಜನರಿಗೆ ಇನ್ನೂ ನಿವೇಶನವನ್ನೇ ನಾವು ಕೊಟ್ಟಿಲ್ಲ. ಇದೇ ಕಾರಣದಿಂದ ಅವನು ಚುನಾವಣೆಗೆ ನಿಲ್ಲುವುದೇ ಬೇಡವೇ? ಕೇವಲ ರಾಜಕಾರಣ ದೃಷ್ಟಿಯಿಂದ ಕಾನೂನನ್ನು ಬದಲಾವಣೆ ಮಾಡಿರುವುದು ಸರಿಯಿಲ್ಲ. ಈಗ ಮಾಡಿರುವ ಕಾನೂನನ್ನು ಮತ್ತೊಮ್ಮೆ ಪರಿಶೀಲನೆ ಮಾಡಲು ಮಂತ್ರಿಗಳು ಗಮನಹರಿಸಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಪಿ. ಮುದ್ದುಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಸ್ನೇಹಿತರಾದ ನಾರಾಯಣ್‌ರವರು ಕುಡಿಯುವ ನೀರಿನ ಯೋಜನೆಗೆ ಪ್ರತ್ಯೇಕವಾದ ವಿದ್ಯುಚ್ಛಕ್ತಿ ಸಂಪರ್ಕವನ್ನು ಒದಗಿಸಲಾಗುವುದೇ ಎನ್ನುವ ಪ್ರಶ್ನೆಯನ್ನು ಹಾಕಿದ್ದರು. ಅದರ ಬಗ್ಗೆ ಸ್ವಲ್ಪ ಚರ್ಚೆಯಾಗಿ ನಂತರ ಆ ಪ್ರಶ್ನೆ ತಡೆಹಿಡಿಯಲ್ಪಟ್ಟಿತು. ಆಮೇಲೆ ಅದಕ್ಕೆ ಸರ್ಕಾರದಿಂದ ಸರಿಯಾದ ಉತ್ತರ ಬರಲೇ ಇಲ್ಲ. ಇಂದು ಕುಡಿಯುವ ನೀರಿಗೋಸ್ಕರ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ವಿಶ್ವಬ್ಯಾಂಕ್ ಮೂಲಕ ಇರುವ ಯೋಜನೆಗಳ ಜಾಲ್ತಿಗೆ ಯಾವ ತೊಂದರೆಯೂ ಆಗಿಲ್ಲ. ಆದರೆ ಎ.ಆರ್.ಡಬ್ಲ್ಯೂ.ಎಸ್., ಎನ್.ಆರ್.ಡಬ್ಲ್ಯೂ.ಎಸ್ ಮತ್ತು ಎಂ.ಡಬ್ಲ್ಯೂ.ಎಸ್‌ಯ ಯೋಜನೆಗಳ ಮೂಲಕ ಏನು ಕೆಲಸ ಮಾಡಲಾಗುತ್ತಿದೆ ಅದರಲ್ಲಿ ಶೇಕಡ 60 ಭಾಗದ ಯೋಜನೆಗಳು ಸರಿಯಾಗಿ ನಡೆಯುತ್ತಲೇ ಇಲ್ಲ. ಆಯೋಜನೆಗಳ ಫಲ ಸಾರ್ವಜನಿಕರಿಗೆ ಸಿಗುತ್ತಿಲ್ಲವೆಂದು ಹೇಳಿದರೆ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಾರಣ ವಿದ್ಯುತ್ ಸಂಪರ್ಕ ಇಲ್ಲದಿರುವುದರಿಂದಲೇ ಈ ಯೋಜನೆಗಳ್ಯಾವುವು ಕೆಲಸ ಮಾಡುತ್ತಿಲ್ಲ. ನಾವು ಪದೇ ಪದೇ ಕುಡಿಯುವ ನೀರಿನ ಯೋಜನೆಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಬೇಕೆನ್ನುವ ಮನವಿಯನ್ನು ಮಾಡುತ್ತಿದ್ದರೂ ಕೂಡ ಇದುವರೆಗೂ ನಿರ್ದಿಷ್ಟವಾದ ಆದೇಶ ಸರ್ಕಾರದಿಂದ ಬರಲೇ ಇಲ್ಲ. ಆದೇಶ ಬರದಿರುವುದರಿಂದಲೇ ಕೆ.ಇ.ಬಿಯವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿಲ್ಲ. ಆದುದರಿಂದ ಟೈಮ್‌ಬಾಂಡ್ ಪ್ರೋಗ್ರಾಂ ಹಾಕಿಕೊಂಡು ಒಂದು ಯೋಜನೆಗೆ ಇಂತಿಷ್ಟು ದಿವಸದಲ್ಲಿ ಅವರಿಗೆ ಸರ್ವೀಸ್ ಕೊಡಲೇಬೇಕು ಮತ್ತು ಅದಕ್ಕೆ ಪ್ರತ್ಯೇಕವಾಗಿ ಒಂದು ಟಿ.ಸಿ. ಇಡಬೇಕೆನ್ನುವ ಆದೇಶವನ್ನು ಮಾಡದೇ ಹೋದರೆ ಇಂದು ಕುಡಿಯುವ ನೀರಿನ ಯೋಜನೆಗೋಸ್ಕರ ನಾವು ಕೋಟ್ಯಾಂತರ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದೇವೆ ಅದು ವ್ಯರ್ಥವಾಗಿ ನಿಜವಾಗಿಯೂ ಜನರಿಗೆ ಯೋಜನೆಯ ಫಲ ಸಿಗುವುದಿಲ್ಲವೆಂದು ಹೇಳುತ್ತಿದ್ದೇನೆ. ಆದುದರಿಂದರ, ಸರ್ಕಾರ ಆದೇಶ ಹೊರಡಿಸುವಂತೆ ಮಂತ್ರಿಗಳು ಕಠಿಣವಾದ ನಿಲವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇನ್ನು ಎರಡನೆಯದಾಗಿ ರಾಮಯ್ಯನವರು ಮಾತನಾಡುತ್ತಾ ವಿಶ್ವಬ್ಯಾಂಕ್ ಯೋಜನೆಗಳಲ್ಲೂ ಸರಿಯಾಗಿ ಕೆಲಸವಾಗುತ್ತಿಲ್ಲವೆಂದು ಹೇಳಿದರು. ವಿಶ್ವಬ್ಯಾಂಕ್ ಯೋಜನೆ, ಎ.ಆರ್.ಡಬ್ಲ್ಯೂ.ಎಸ್. ಮತ್ತು ಎಂ.ಡಬ್ಲ್ಯೂ.ಎಸ್ ಮತ್ತು ಇನ್ನಿತರ

ಕುಡಿಯುವ ನೀರಿನ ಯೋಜನೆಗಳಿಗೆ ಬಳಸುತ್ತಿರುವ ಸಾಮಗ್ರಿಗಳೆಲ್ಲವೂ ಕಳಪೆ ದರ್ಜೆಯವುಗಳೇ ಆಗಿವೆ. ನೀವು ಯಾವುದರಲ್ಲಾದರೂ ಪರೀಕ್ಷೆ ಮಾಡಿಸಿ. ಇದರಲ್ಲಿ ಎಲ್ಲಾ ಹಂತಗಳಲ್ಲೂ ರಾಜಿಯಾಗುತ್ತಿದ್ದಾರೆ. ಜಿಲ್ಲಾ ಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯತಿ ಇರಬಹುದು ಅಥವಾ ಗ್ರಾಮ ಪಂಚಾಯತಿ ಇರಬಹುದು, ಇಲ್ಲೆಲ್ಲಾ ಖರೀದಿ ಹಂತದಲ್ಲಿ Compromising with the quality ಮಾಡಿಕೊಂಡು ಬಿಟ್ಟಿರುತ್ತಾರೆ. ಹೀಗಾಗಿ ಕುಡಿಯುವ ನೀರಿನ ಯೋಜನೆಗಳು ಸರಿಯಾಗಿ ಆಗದಿರುವುದಕ್ಕೆ ಇದೂ ಒಂದು ಕಾರಣವಾಗಿದೆ. ಆದುದರಿಂದ, ಒಳ್ಳೆಯ ಗುಣಮಟ್ಟದ ಸಾಮಗ್ರಿಗಳನ್ನು ಉಪಯೋಗಿಸಬೇಕೆಂದು ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವನ್ನು ಒದಗಿಸಬೇಕೆಂದು ಆದೇಶ ಹೊರಡಿಸಲು ಮಂತ್ರಿಗಳು ಗಮನಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕಡೆಯದಾಗಿ ಇಂಜಿನಿಯರ್‌ಗಳು ಎನ್. ಆರ್. ಎಂದು ಸ್ಕೀಮ್ ಮಾಡಿಕೊಂಡು ಅವರೇ ಕಂಟ್ರಾ ಕ್ಟ್ ಮಾಡುವ ಪದ್ಧತಿಯೂ ನಮ್ಮಲ್ಲಿದೆ. ಈ ಪದ್ಧತಿ ಹೋಗದಿರುವುದರಿಂದ ಎಲ್ಲಿ ಕೆಲಸವಾಗುತ್ತಿದೆ, ಯಾರು ಕಂಟ್ರಾ ಕ್ಟ್‌ರ್, ಎಷ್ಟು ಪೇಮೆಂಟ್ ಆಯಿತು, ಯಾರಿಗೆ ಪೇಮೆಂಟ್ ಆಯಿತು ಎಂಬ ವಿವರಗಳ್ಯಾವುವು ಸರಿಯಾಗಿ ಗೊತ್ತಾಗುತ್ತಲೇ ಇಲ್ಲ. ಇಂಜಿನಿಯರ್‌ಗಳು ಬ್ಯಾಂಕ್‌ನಿಂದ ಹಣವನ್ನು ಡ್ರಾ ಮಾಡಿ ಜೇಬಿನಲ್ಲಿಟ್ಟುಕೊಂಡು ಅವರು ಎಷ್ಟೋ ಹಣವನ್ನು ಕೊಟ್ಟು ಅವರಿಗೆ ಬೇಕಾದ ಹಣದ ಮೊತ್ತಕ್ಕೆ ರುಜು ಹಾಕಿಸಿಕೊಳ್ಳುತ್ತಿರುವ ವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಅಥವಾ ಇದನ್ನು ರದ್ದು ಪಡಿಸದಿದ್ದರೆ ಕಾಮಗಾರಿ ವಿಷಯದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಸಾಕಷ್ಟು ಅವ್ಯವಹಾರಗಳು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಆದುದರಿಂದ ಈ ವ್ಯವಸ್ಥೆಯನ್ನೇ ತೆಗೆದು ಅದಕ್ಕೆ ಬದಲಾಗಿ ಲೆಕ್ಕ ಇಡುವ ವ್ಯವಸ್ಥೆಯನ್ನು ತಂದು ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ವಿವರ ಗೊತ್ತಾಗುವಂತೆ ಇರಬೇಕು. ಏಕೆಂದರೆ ಇಂದು ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಯ ಅಕೌಂಟಬಿಲಿಟಿ ಬಗ್ಗೆ ಜನರಲ್ಲಿ ಸಂಶಯವಿರುವುದರಿಂದ ಇದನ್ನು ತೆಗೆದುಹಾಕಲು ಬದಲಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಒಂದು ಕ್ರಮವನ್ನು ಸೂಚಿಸಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ಇಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಒಂದು extension of engineering department ಆದ ಹಾಗೆ ಆಗಿದೆ. ಹಿಂದೆ ಏನು Community Development programme concept ಎನ್ನುವ ತತ್ವ ಏನಿತ್ತು ಅದರಿಂದ ಆರ್. ಡಿ. ಪಿ. ಆರ್. ಬಹಳ ದೂರ ಹೋಗಿದೆ ಎನಿಸುತ್ತದೆ. ಇವೊತ್ತು ಈ ಇಲಾಖೆಯಲ್ಲಿ ಏನಾದರೂ ಚಟುವಟಿಕೆ ನಡೆಯುತ್ತಿದೆ ಎಂದರೆ ಅದು ಕೇವಲ ಶಾಲೆ ಕಟ್ಟುವುದು, ರಸ್ತೆಗಳನ್ನು ನಿರ್ಮಾಣ ಮಾಡುವುದು ಮತ್ತು ಚಪ್ಪಡಿ ಹಾಕುವ ಕೆಲಸಗಳಿಗೆ ಮಾತ್ರ ಸೀಮಿತವಾಗಿರುವ ಸನ್ನಿವೇಶ ಬಂದಿದೆ. ಹತ್ತಾರು ವರ್ಷಗಳಲ್ಲಿ ಹಿಂದೆ ಆರ್. ಡಿ. ಪಿ. ಆರ್. ಕೆಲಸಗಳೇ ಬೇರೆ ಬೇರೆಯದಾ ಗಿದ್ದು ಬಡವರ್ಗದ, ಹಿಂದುಳಿದ ವರ್ಗದವರು ಮತ್ತು ಗ್ರಾಮೀಣ ಜನತೆಯ ಸಮೀಪ ಹೋಗಿ ಅವರಿ ಗೆ ಸಹಾಯವನ್ನು ಮಾಡುವಂಥ ಉತ್ತಮವಾದ ಕೆಲಸಗಳನ್ನು ಮಾಡುತ್ತಿತ್ತು. ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೆಂದರೆ ಇಂದು ಅಧಿಕಾರಿಗಳು ಮತ್ತು ಪ್ರತಿನಿಧಿಗಳು ಕೇವಲ ಇಂಥ ಕಾಮಗಾರಿಗಳನ್ನು ಮಾಡಲು ಮುಂದಾಗುತ್ತಾರೆಯೇ ಹೊರತು ಬೇರೆ ಬೇರೆ ಇಲಾಖೆಯಿಂದ ಬಂದಂಥ ಅನೇಕ ಬಡವರಪರ

ಕೆಲಸಗಳನ್ನು ಮಾಡುವುದಕ್ಕೆ ಒತ್ತನ್ನು ಕೊಡುತ್ತಿಲ್ಲ. ಇದಕ್ಕೇ ಹೆಚ್ಚು ಒತ್ತನ್ನು ಅವರುಗಳು ಕೊಡುವಂತೆ ಸಚಿವರು ಕ್ರಮ ತೆಗೆದುಕೊಳ್ಳಬೇಕು. ಈ ಕೆಲಸಗಳನ್ನು ಮಾಡಲು ಕಂದಾಯ ಇಲಾಖೆ, ಸಹಕಾರ ಇಲಾಖೆ ಮತ್ತು ಬೇರೆ ಇಲಾಖೆಯಿಂದ ಅಧಿಕಾರಿಗಳಿಂದ ಹಿಡಿದು ಜವಾನನವರೆಗೆ ಎರವಲು ಪಡೆದಿರುವ ಜನಗಳೇ ಆರ್.ಡಿ.ಪಿ.ಆರ್.ನಲ್ಲಿ ಜಾಸ್ತಿ ಇದ್ದಾರೆ. ಆದರೆ ಹತ್ತಾರು ವರ್ಷಗಳ ಹಿಂದೆ ಈ ಸಂಖ್ಯೆ ಬಹಳ ಕಡಿಮೆ ಇತ್ತು. ಆದುದರಿಂದ ಆ ಕೇಡರ್‌ಗಳನ್ನು ಸರಿಯಾಗಿ ಮಾಡಿ ಬೇರೆ ಬೇರೆ ಇಲಾಖೆಗಳಲ್ಲಿ ಹೇಗಿದೆಯೋ ಹಾಗೆ ಮಾಡಿ ಆರ್.ಡಿ.ಪಿ.ಆರ್.ಗೆ ಸಂಬಂಧಪಟ್ಟಂತೆ ಸಿಬ್ಬಂದಿ ಮತ್ತು ಅದರ ಮೂಲಕ ಕಲ್ಚರ್ ಮತ್ತು ಓರಿಯೆಂಟೇಶನ್ ಮಾಡಿಸುವಂಥ ಕೆಲಸವನ್ನು ಮಾಡಿಸಬೇಕು. ಇಂದು ಹಳ್ಳಿಗಳು ಬೇಕಾಬಿಟ್ಟಿಯಾಗಿ ಬೆಳೆಯುತ್ತಿದೆ. ಒಂದೊಂದು ದಿಕ್ಕಿಗೂ ಒಂದೊಂದು ಹಳ್ಳಿಯಂತೆ ಹೆಚ್ಚು ಹಳ್ಳಿಗಳು ಬೆಳೆಯುತ್ತಿವೆ. ಇದು ಹಿಂದೆ ಕೇಂದ್ರೀಕತವಾಗಿತ್ತು. ಹಳ್ಳಿ ಪ್ಲಾನ್ ಬಗ್ಗೆ ಕೂಡ ವ್ಯವಸ್ಥಿತವಾಗಿ ಹಾಕಿಕೊಳ್ಳಬೇಕಂದು ವಿನಂತಿ ಮಾಡುತ್ತೇನೆ.

+ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಸನ್ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಗ್ರಾಮಸಭೆಗೆ ಮಹತ್ವಪೂರಿತವಾದ ಸ್ಥಾನವಿದೆ. ಇಂದು ಎಲ್ಲಾ ಗ್ರಾಮ ಪಂಚಾಯಿತಿಯ ಸೇವೆಯನ್ನು ಗ್ರಾಮ ಸಭೆಯ ಮೂಲಕ ಮಾಡುವಂಥ ಹಂತದಲ್ಲಿ ಕೇವಲ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಪಂಚಾಯಿತಿ ಕಾರ್ಯದರ್ಶಿಮತ್ತು ಕೆಲವು ಹಿತಾಸಕ್ತಿ ವ್ಯಕ್ತಿಗಳು ಕೂಡಿ ಕೊಂಡು ಗ್ರಾಮಸಭೆಯನ್ನು ಮಾಡಲು ಹೊರಟ್ಟಿದ್ದಾರೆ. ಗ್ರಾಮ ಪಂಚಾಯಿತಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಆ ಗ್ರಾಮ ಸಭೆಯಲ್ಲಿ ಗ್ರಾಮದ ಹೆಚ್ಚು ಜನಗಳು ಕೂಡಿಕೊಂಡು ಚರ್ಚೆ ಮಾಡಲು ಅವಕಾಶ ಆಗುವಂತೆ ಮಾಡಲು ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಇನ್ನು ಎರಡನೆಯದಾಗಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿ ನಡೆಸುತ್ತಿರುವ ಕಾಮಗಾರಿಗಳ ಕೆಲಸ ಕಳಪೆ ಮಟ್ಟದ್ದಾಗಿವೆ. ಇದಕ್ಕೆ ಕಾರಣ ಪಂಚಾಯಿತಿ ಮೆಂಬರ್, ತಾಲ್ಲೂಕು ಪಂಚಾಯಿತಿ ಮೆಂಬರ್‌ಗಳ ಸಂಬಂಧಿಕರು ಇಂಥ ಕಾಮಗಾರಿಗಳನ್ನು ತೆಗೆದುಕೊಳ್ಳವುದರಿಂದ ಹಿಡಿತವಿಲ್ಲದಾಗಿದೆ. ಆದುದರಿಂದ, ಕಾಮಗಾರಿಯ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಮಂತ್ರಿಗಳು ಆಸಕ್ತಿವಹಿಸಿ ಇಲಾಖೆ ಮೂಲಕ ಕಟ್ಟು ನಿಟ್ಟಿನ ಯಾವುದಾದರೂ ಕ್ರಮವನ್ನು ಕೈಗೊಳ್ಳದೇ ಹೋದರೆ ಯೋಜನೆ ಕಾಮಗಾರಿ ಕೆಲಸ ವ್ಯರ್ಥವಾಗುತ್ತದೆ. ಏಕೆಂದರೆ 100ಕ್ಕೆ 25 ರಷ್ಟೂ ಕೂಡ ಯೋಜನೆಯಲ್ಲಿ ಹಣ ಸದುಪಯೋಗವಾಗುತ್ತಿಲ್ಲ. 75 ರಷ್ಟು ಹಣ ದುರುಪಯೋಗ ವಾಗುತ್ತಿದೆ ಎಂಬುದನ್ನು ಹೇಳಬಯಸುತ್ತೇನೆ. ಈ ದಿಸೆಯಲ್ಲಿ ಮಂತ್ರಿಗಳು ಗಮನಹರಿಸಿ ಇಲಾಖೆ ಮೂಲಕ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಡಿ.ಸಿ. ತಮ್ಮಣ್ಣ(ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದುವರೆಗಿನ ತಮ್ಮ ಅನುಭವವನ್ನು ಭಟ್ಟಿ ಇಳಿಸಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಹೆಚ್ಚು ಒತ್ತುಕೊಟ್ಟಿದ್ದಾರೆ. ಆ ವಿಷಯದಲ್ಲಿ ಎರಡನೇಯ ಮಾತೇ ಇಲ್ಲ. ಆದೆರ ಹಾಲಿ ಕುಡಿಯುವ ನೀರಿನ ವ್ಯವಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಏನಿವೆ ಅವುಗಳು ಸಮರ್ಪಕವಾಗಿಲ್ಲವೆಂದು ಹೇಳುವುದರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಶುದ್ಧವಾದ ನೀರನ್ನು ಕುಡಿಯಲು ವ್ಯವಸ್ಥೆ ಮಾಡಿದವರು ದಿವಂಗತ ನಜೀರ್‌ಸಾಬ್‌ರವರೇ ಆಗಿದ್ದಾರೆ. ಅವರನ್ನು ನೀರ್ ಸಾಬ್ ಎಂತಲೇ ಕರೆಯುತ್ತಿದ್ದರು. ಅವರು ಯಾವ ಪಕ್ಷಕ್ಕೆ ಸೇರಿದವರಾಗಿದ್ದರೂ ಕೂಡ ಗ್ರಾಮಾಂತರ ಪ್ರದೇಶದ ಜನಗಳು

ಇಂದಿಗೂ ಅವರನ್ನು ಸ್ಮರಿಸಿಕೊಳ್ಳುತ್ತಿದ್ದಾರೆ. ಆದರೆ, ಅವರು ಕುಡಿಯುವ ನೀರಿನ ಯೋಜನೆಯನ್ನು ಪ್ರಾರಂಭ ಮಾಡಿದಾಗ ಇದ್ದ ಅಂತರ್ಜಲದ ಮಟ್ಟಕ್ಕೂ ಇಂದಿಗೂ ಬಹಳಷ್ಟು ವ್ಯತ್ಯಾಸವಿದ್ದು ಸುಮಾರು 100ರಿಂದ 200 ಅಡಿಯವರೆಗೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರಿನ ಸರಬರಾಜಾಗುತ್ತಿರುವುದರಿಂದ ಪ್ರತಿ ವರ್ಷ ಗ್ರಾಮಾಂತರ ಪ್ರದೇಶಗಳ ಶೇಕಡ 50 ರಷ್ಟು ಕೊಳವೆ ಬಾವಿಗಳು ನೀರಿಲ್ಲದೇ ಫೈಲ್ಯೂರ್ ಆಗುತ್ತಿವೆ. ಆದುದರಿಂದ ಸತತವಾಗಿ ನಾವು ಇನ್ನು ಮುಂದೆಯೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಕೊಳವೆ ಬಾವಿಗಳ ಮೂಲಕ ನೀರಿನ ವ್ಯವಸ್ಥೆಯನ್ನು ಶಾಶ್ವತವಾಗಿ ಮಾಡುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ನಾವು ಪಟ್ಟಣ ಪ್ರದೇಶಗಳಿಗಷ್ಟೇ ಶುದ್ಧ ನೀರನ್ನು ಕೊಟ್ಟರೆ ಸಾಲದು. ಕೆಲವು ಪಟ್ಟಣ ಪ್ರದೇಶಗಳಿಗೆಕುಡಿಯುವ ನೀರಿನ ವ್ಯವಸ್ಥೆ ಮಾಡುವಾಗ ಹಳ್ಳಿಗಾಡಿನ ಪ್ರದೇಶಗಳಿಗೂ ಮಾಡಬೇಕು. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ತಮ್ಮ ಗಮನವನ್ನು ಈ ಕಡೆ ಕೊಡಬೇಕೆಂದು ನನ್ನ ಮನವಿ. ಈಗ ಅಂತರ್ಜಲ ಮಟ್ಟದ ಕುಸಿತದಿಂದ ನಾವು ಗ್ರಾಮಾಂತರ ಪ್ರದೇಶದಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. ಆ ದಿಸೆಯಲ್ಲಿ ಈಗಾಗಲೇ ಮಾನ್ಯ ವೈ.ಕೆ. ರಾಮಯ್ಯನವರು ಹೇಳಿದರು, ನಮ್ಮ ರಾಜ್ಯದಲ್ಲಿ 55 ಲಕ್ಷ ಎಕರೆಗೆ ಆಗುವಷ್ಟು ನೀರಿನ ಸೌಲಭ್ಯ ಇದೆ. ಆದರೆ ಕೇವಲ 12 ರಿಂದ 13 ಲಕ್ಷ ಎಕರೆಗಳಷ್ಟು ಮಾತ್ರ ನಾವು ನೀರಾವರಿ ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಹಾಗಾದರೆ, ಉಳಿದ ನೀರು ಎಲ್ಲಿ ಹೋಗುತ್ತಿದೆ? ನಮಗೆ ಸಾಕಷ್ಟು ನೀರಿನ ಸೌಲಭ್ಯ ಇದ್ದರೂ ಕೂಡ ಅದನ್ನು ಸದುಪಯೋಗ ಮಾಡಿಕೊಂ ಡು ಅದರಿಂದ ಕುಡಿಯುವ ನೀರಿನ ವ್ಯವಸ್ಥೆಯಾಗಲಿ ಅಥವಾ ವ್ಯವಸಾಯಕ್ಕೆ ಆಗಲಿ ಮಾಡಿಕೊಳ್ಳಬೇಕು. ಆದರೆ ಅದರ ಸದುಪಯೋಗ ಮಾಡಿಕೊಳ್ಳುತ್ತಿಲ್ಲ. ಆ ದಿಸೆಯಲ್ಲಿ ಪಟ್ಟಣ ಪ್ರದೇಶಗಳಿಗೆ ನಾವೇನು ಮೇಜರ್ ವಾಟರ್ ಸಪ್ಲೈ ಸ್ಕೀಂ ಮಾಡುತ್ತೇವೆ 20ರಿಂದ 30 ಭಾಗ ಆ ಸ್ಕೀಂನ ಮೇಜರ್ ಪೈಪ್‌ಲೈನ್ ಬರುವ ರೂಟ್‌ನಲ್ಲಿ ಪಟ್ಟಣ ಪ್ರದೇಶಗಳಿಗೆ ನೀರು ಸರಬರಾಜು ಮಾಡುವಾಗ ಹಳ್ಳಿಗಾಡಿನ ಪ್ರದೇಶಗಳಿಗೂ ಕೂಡ ನೀರಿನ ಸರಬರಾಜು ಮಾಡುವ ವ್ಯವಸ್ಥೆಯಾಗ ಬೇಕು. ಆಗಲೇ ಹಳ್ಳಿಗಾಡಿನ ಪ್ರದೇಶಗಳಿಗೂ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಕೆಲವು ಹಳ್ಳಿಗಳಲ್ಲಿ ನಾನು ನೀರನ್ನು ಕೂಡ ಟೆಸ್ಟ್ ಮಾಡಿಸಿದ್ದೇನೆ. ಕೆಲವು ಬೋರ್‌ವೆಲ್‌ಗಳಲ್ಲಿ ನೈಟ್ರೇಟ್ ಇದೆ. ಕೆಲವು ಬೋರ್‌ವೆಲ್‌ಗಳಲ್ಲಿ ಫಾಸ್ಫೇಟ್ ಇದೆ, ಇನ್ನು ಕೆಲವು ಬೋರ್‌ವೆಲ್‌ಗಳಲ್ಲಿ ಕ್ಲೋರೈಡ್ ಕೂಡ ಇದೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಈಗಾಗಲೇ ಸ್ವಚ್ಛ ಗ್ರಾಮೀಣ ಯೋಜನೆಯನ್ನು ಮಾಡಬೇಕೆಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ. ಅದು ಸ್ವಾಗತಾರ್ಹವಾದ ವಿಚಾರ. ಆದರೆ ಹಳ್ಳಿಗಾಡಿನಲ್ಲಿ ಈ ಶೌಚಾಲಯ ವ್ಯವಸ್ಥೆ ಇಲ್ಲದೆ ತಿಪ್ಪೆಗುಂಡಿಗಳು ಹಳ್ಳಿಯ ಮಧ್ಯದಲ್ಲಿ ಇರುವುದರಿಂದ ಅದರ ಪಕ್ಕದಲ್ಲಿ ಒಂದು ಬೋರ್‌ವೆಲ್ ಡ್ರಿಲ್ ಮಾಡಿರುತ್ತಾರೆ. ಈ ಬೋರ್‌ವೆಲ್ ಕಂಟಾಮಿನೇಟ್ ಆಗಿ ಟೆಸ್ಟ್ ಕೂಡ ಮಾಡದೆ ಅಂತಹ ನೀರು ಹಳ್ಳಿಗಳಲ್ಲಿ ಇವತ್ತು ಕೂಡ ಸರಬರಾಜು ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರಿಂದ ಗ್ರಾಮಾಂತರ ಪ್ರದೇಶದ ಜನರ ಆರೋಗ್ಯ ಕೂಡ ಕೆಡುತ್ತಿದೆ.

ಅಧ್ಯಕ್ಷರು : ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಡಿ.ಸಿ. ತಮ್ಮಣ್ಣ : ಆದುದರಿಂದ ಹಳ್ಳಿಗಾಡಿನಲ್ಲಿ ಇರತಕ್ಕಂಥ ಬೋರ್‌ವೆಲ್‌ನ ನೀರನ್ನು ಟೆಸ್ಟ್ ಮಾಡಿಸಿ, ಅಲ್ಲಿ ಶುದ್ಧ ನೀರು ಸಿಗುತ್ತಿದೆಯೋ, ಇಲ್ಲವೋ, ಅದು ಸಿಗಬೇಕಾದರೆ ಏನು ಮಾಡಬೇಕು

ಎನ್ನುವ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಮತ್ತು ಹಳ್ಳಿಗಾಡಿನ ರಸ್ತೆ ಬಗ್ಗೆ ಹೇಳುವುದಾದರೆ ಒಟ್ಟು 70 ಸಾವಿರ ಕಿಲೋಮೀಟರ್ ರಸ್ತೆ ಇದೆ ಎಂದು ಹೇಳಿದರು. ನನ್ನ ಮಾಹಿತಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಒಟ್ಟು 1,42,800 ಕಿಲೋಮೀಟರ್ ರಸ್ತೆ ಇದೆ. ಅದರಲ್ಲಿ ರೂರಲ್ ರೋಡ್ಸ್ 91:038 ಕಿಲೋಮೀಟರ್ ಇದೆ. ಇದರಲ್ಲಿ ಈಗಾಗಲೇ ನೀರಾವರಿ ಕಾಲುವೆ ರಸ್ತೆಗಳನ್ನು ಪಂಚಾಯತ್ ರಾಜ್‌ಗೆ ವಹಿಸಿದ್ದಾರೆ. ಆ ರಸ್ತೆಗಳು ಇದರಲ್ಲಿ ಸೇರಿಲ್ಲ. ಎಲ್ಲಾ ಸೇರಿದರೆ ನನ್ನ ಅಂದಾಜಿನ ಪ್ರಕಾರ ಒಂದು ಲಕ್ಷ ಕಿಲೋಮೀಟರ್ ಗ್ರಾಮಾಂತರ ಪ್ರದೇಶಗಳಲ್ಲಿ ರೂರಲ್ ರೋಡ್ಸ್ ಬರುತ್ತವೆ. ಇದನ್ನು ಅಭಿವೃದ್ಧಿ ಮಾಡಬೇಕಾದರೆ ತಾವು ಹೇಳಿರುವ ಹಾಗೆ 10,000 ಕಿಲೋಮೀಟರ್ ರಸ್ತೆಯನ್ನು ಅಭಿವೃದ್ಧಿ ಮಾಡುವುದಕ್ಕೆ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಆ 200 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿ ಇದನ್ನು ಮಾಡಿದರೂ ಕೂಡ ಇನ್ನು 10 ವರ್ಷಗಳಲ್ಲಿ ಈ ಗ್ರಾಮೀಣ ಪ್ರದೇಶದ ರಸ್ತೆಗಳನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ತಾವು ಹೆಚ್ಚು ಒತ್ತು ಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಿದರಲ್ಲ, ಅದಕ್ಕೆ ಉತ್ತರ ಹೇಳುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಹೇಳುತ್ತೇನೆ, ಆದರೆ ಎಲ್ಲಾ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಆಗದಿದ್ದರೂ ಕೂಡ ಪ್ರಮುಖವಾದಂಥ ಪ್ರಶ್ನೆಗಳಿಗೆ ಹೇಳುತ್ತೇನೆ. ಇದರಲ್ಲಿ ಭ್ರಷ್ಟಾಚಾರದ ಪ್ರಶ್ನೆ ಪ್ರಾಮುಖ್ಯವಾದಂ ತಾದ್ದು. ಭ್ರಷ್ಟಾಚಾರದ ವಿಕೇಂದ್ರೀಕರಣವಾಗಬಾರದು ಎಂದು ಎಲ್ಲರ ಅಭಿಪ್ರಾಯ. ಭ್ರಷ್ಟಾಚಾರವನ್ನು ತಡೆಗಟ್ಟುವುದು ಹೇಗೆ? ಇದರ ಬಗ್ಗೆ ಬಹಿರಂಗವಾದಂತಹ ಚರ್ಚೆ ಅಷ್ಟೇ ಅಲ್ಲ, ಕಾರ್ಯಕ್ರಮವನ್ನು ನಾವು ಮಾಡಬೇಕಾಗುತ್ತದೆ. ಅದಕ್ಕೆ ನಾನು ಹೇಳಿದೆ, ಗ್ರಾಮಸಭೆಯನ್ನು ಬಲಪಡಿಸಬೇಕು. ಗ್ರಾಮಸಭೆಯಲ್ಲಿ ಪಾರದರ್ಶಕ ವ್ಯವಸ್ಥೆಯಿರಬೇಕು. ಅಧಿಕಾರಸ್ಥರು ಗ್ರಾಮಸಭೆಯಲ್ಲಿ ಭಾಗವಹಿಸಬೇಕು ಮತ್ತು ಗ್ರಾಮಸಭೆಯಲ್ಲಿ ಯಾರಾದರೂ ಒಬ್ಬರೂ ಧೈರ್ಯವಾಗಿ ಎದ್ದು ನಿಂತು ಇಂತಹ ಕಡೆ ಕಳಪೆ ಕೆಲಸವಾಗಿದೆ ಎಂದರೆ ಅದನ್ನು ತಕ್ಷಣ ನೋಡಿ ಅದರ ಬಗ್ಗೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಆ ಕೆಲಸ ಇವತ್ತು ಆಗುತ್ತಿಲ್ಲ. ಇವತ್ತು ತನಿಖೆಯಾಗುತ್ತದೆ. ಆದರೆ ಅದು ತಿಂಗಳಾನುಗಟ್ಟಲೆ ಆಗುತ್ತದೆ. ತನಿಖೆಯ ವರದಿ ಅಧಿಕಾರಿಗಳೆಲ್ಲಾ ರಿಟೈರ್ಡ್ ಆದಮೇಲೆ ಬರುತ್ತದೆ. ಅದೇ ರೀತಿ ಜನಪ್ರತಿನಿಧಿಗಳು ಅವರ ಅವಧಿ ಮುಗಿದ ನಂತರ ಏನಾದರೂ ಗೊತ್ತಾದರೆ ಏನು ಪ್ರಯೋಜನ ಇದೆ? ಆದುದರಿಂದ ನನ್ನ ದೃಷ್ಟಿಯಲ್ಲಿ quick inspection and punishment and open public inspection of accounts ಇದನ್ನು ಮಾಡಬೇಕಾದರೆ ಅದಕ್ಕೆ ನಾನು ಹೇಳಿದೆ ಪಂಚಾಯತ್ ಜಮಾಬಂದಿ ಆಗಬೇಕು ಎಂದು ಉದ್ದೇಶ ಏನೆಂದರೆ ಬರಿ ಸೆಕ್ರೆಟರಿ ಮೇಲೆ ಅವಲಂಬಿಸಿ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು. ಅದರಲ್ಲಿ ತರಬೇತಿ ಪಡೆದಿರತಕ್ಕಂಥ ಅಧಿಕಾರಿಗಳನ್ನು ಕರೆಸಿ ಅಲ್ಲಿ ಏನಾದರೂ ಬಹಿರಂಗವಾಗಿ ನೋಡಿಸಿ ಆದರ ಮೇಲೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಬೇಕು. ಅದೇ ರೀತಿ ಗ್ರಾಮಸಭೆ ಮೇ ತಿಂಗಳಲ್ಲಿ ಮಾಡಿದರೆ ಬಹುಶಃ ಚುನಾವಣೆಗಳು ಇರುವುದರಿಂದ ಮತ್ತು ಗ್ರಾಮಸಭೆ ಪರಿಣಾಮಕಾರಿ ಯಾಗಿ ನಡೆಯುತ್ತಿಲ್ಲ ಎನ್ನುವ ಅಭಿಪ್ರಾಯ ಇರುವುದರಿಂದ ಅದರ ಬಗ್ಗೆ ಸ್ವಲ್ಪ ಚರ್ಚೆ ಗಂಭೀರವಾಗಿ ನಡೆಯಲಿ. ಚುನಾವಣೆ ಆದರೆ 80,000 ಜನ ಆರಿಸಿ ಬರುತ್ತಾರೆ. ಬಂದನಂತರ ಅದನ್ನು ತಡೆಗಟ್ಟ ಬೇಕಾದರೆ ಏನೇನು ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಸಬೇಕು. ಮಲೆನಾಡಿನಲ್ಲಿ ಮಳೆ ಬರುತ್ತಿದ್ದರೆ ಬೇರೆ ತಿಂಗಳನ್ನು ಆರಿಸುವ ಪ್ರಶ್ನೆ ಅಲ್ಲ.

ಮೇ ತಿಂಗಳಿನಲ್ಲಿ ಗ್ರಾಮಸಭೆ ನಡೆಸುವುದಕ್ಕಿಂತ ಅದರ ಬಗ್ಗೆ ಮೂಲಭೂತವಾಗಿ ಚರ್ಚೆ ನಡೆದು ಬದಲಾವಣೆಗಳನ್ನು ಮಾಡಿ ಒಂದು ಕ್ರಾಂತಿಕಾರಕವಾದಂತಹ ರೀತಿಯಲ್ಲಿ ಗ್ರಾಮಸಭೆ ನಡೆಸಿದರೆ ಮಾತ್ರ ಈ ಭ್ರಷ್ಟಾಚಾರದ ವಿಕೇಂದ್ರೀಕರಣ ತಡೆಗಟ್ಟುವುದಕ್ಕೆ ಸಾಧ್ಯ ಎಂದು ಸರ್ಕಾರದ ಅಭಿಪ್ರಾಯ ಇದೆ. ಇದರ ಬಗ್ಗೆ ಮುನ್ನೆಚ್ಚರಿಕೆ ಕೊಡುವ ಬಗ್ಗೆ ನಾನು ಹೇಳಿದೆ. ಇನ್ನು ಮೇನ್ ಟೆನೆನ್ಸ್ ಬಗ್ಗೆ ಯಾವ ಸರ್ಕಾರ ಕೂಡ ಲಕ್ಷ್ಯ ಕೊಟ್ಟಿಲ್ಲವೆನ್ನುವುದು ಇಡೀ ದೇಶದಲ್ಲಿ ಇರತಕ್ಕಂಥ ಪರಿಸ್ಥಿತಿ. ರೋಡ್ ಮೇನೆಟೆನೆನ್ಸ್ ಬಿಲ್ಡಿಂಗ್ ಮೇನ್ ಟೆನೆನ್ಸ್ ಆಗಲಿ ಎಷ್ಟರಮಟ್ಟಿಗೆ ನಮ್ಮ ದೇಶದಲ್ಲಿ ಗಮನ ಕೊಡಬೇಕಾಗಿತ್ತು ಅಷ್ಟು ಕೊಟ್ಟಿಲ್ಲ ಎಂದು ಹೇಳಿದರೆ ಅದು ಸತ್ಯವಾದಂತಹ ಮಾತಾಗುತ್ತದೆ. ಅದಕ್ಕೋಸ್ಕರ ನಾನು ಹೇಳಿದ ರೋಡ್ ಮೇನೆಟೆನೆನ್ಸ್‌ಗೋಸ್ಕರ ಏನು ಮಾಡಬೇಕು? ಈ ಮೈನ್ ಟೆನೆನ್ಸ್ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳವ ಅವಶ್ಯಕತೆ ಇದೆ. ಅದನ್ನು ಸರ್ಕಾರ ಪ್ರಾಮಾಣಿಕತೆಯಿಂದ ಮಾಡುವ ಪ್ರಯತ್ನ ಮಾಡುತ್ತದೆ. ಇನ್ನು ಪರ್‌ಚೇಸ್ ಕಮಿಟಿಯಲ್ಲಿ ಏನು ದೋಷ ಇದೆ ಅದನ್ನು ಸರಿಪಡಿಸಬೇಕು ಅದರ ಬಗ್ಗೆ ಕಡೂ ನಾವು ಸೂಕ್ಷ್ಮವಾಗಿ ನೋಡುತ್ತಿದ್ದೇವೆ. ಪರ್‌ಚೇಸ್ ಕಮಿ ಪ್ರೊಸೀಜರ್ ಯಾವ ರೀತಿಯಿಂದ ಬಲಪಡಿಸ ಬೇಕು, ಇದರ ಬಗ್ಗೆ ಕೂಡ ನಾವು ಗಮನಹರಿಸಿದ್ದೇವೆ. ಇನ್ನು ಅಂಡರ್ ಗ್ರೌಂಡ್ ವಾಟರ್, ಇದು ಬಹಳ ಮುಖ್ಯವಾದಂತಹ ಪ್ರಶ್ನೆ ಇದೆ. ಅಂಡರ್ ಗ್ರೌಂಡ್ ವಾಟರ್ ಬಗ್ಗೆ ನಾವು ಎಫೆಕ್ಟೀವ್ ಆಗಿ ಕಾರ್ಯಕ್ರಮ ಮಾಡದೇ ಹೋದರೆ ಇನ್ನು ಐದತ್ತು ವರ್ಷಗಳಲ್ಲಿ ರಾಜಸ್ತಾನದಲ್ಲಿ ಏನು ಪರಿಸ್ಥಿತಿಯಾಗಿದೆ ಅಂತಹ ಪರಿಸ್ಥಿತಿ ನಮ್ಮ ಹಳ್ಳಿಗಳಲ್ಲಿ ಕೂಡ ಬರುವ ಸಾಧ್ಯತೆ ಇದೆ. ಅದಕ್ಕೋಸ್ಕರ ನಾನು ಆಗಲೇ ನೀರಿನ ಸಮಸ್ಯೆ ಬಗ್ಗೆ ಚರ್ಚೆ ನಡೆದಾಗ ನಾವು ಯಾವ ರೀತಿ ಅಂತರ್ಜಲ ಮಟ್ಟವನ್ನು ಕಾಪಾಡುವುದಕ್ಕೆ ಸಮಗ್ರವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಇದರ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕು ಅದನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಅರಿವು ಇದೆ, ಮನಸ್ಸು ಇದೆ ಮತ್ತು ಇಚ್ಛಾಶಕ್ತಿ ಕೂಡ ಇದೆ. ಇನ್ನು ಬೋರ್‌ವೆಲ್ಸ್ ರಿಪೇರಿ ಬಗ್ಗೆ ಒಂದು ಮಾತು ಹೇಳುವುದಾದರೆ ಬೋರ್‌ವೆಲ್ ರಿಪೇರಿ ಬಗ್ಗೆ ನಾನು ಪದೇಪದೇ ಹೇಳಿದರೂ ಕೂಡ ನಮ್ಮ ಸದಸ್ಯರುಗಳು ಈ ಕಡೆ ಹಾಗೂ ಆ ಕಡೆಯ ವರು ಕೇಳುತ್ತಿರುತ್ತಾರೆ. ಬೋರ್‌ವೆಲ್ ರಿಪೇರಿ ಅದಷ್ಟು ಮಟ್ಟಿಗೆ ಹಳ್ಳಿ ಮಟ್ಟದಲ್ಲಿ ಮಾಡುವಂತಹ ಶಕ್ತಿ ಅವರಿಗೇ ಬರಬೇಕು. ಇದರಲ್ಲಿ ಎರಡು ವಿಚಾರವಿಲ್ಲ. ವರ್ಲ್ಡ್ ಬ್ಯಾಂಕ್‌ನವರು ಅದನ್ನೇ ಹೇಳುತ್ತಿದ್ದಾರೆ. ಆದರೆ ಅವರಿಗೆ ಶಕ್ತಿ ಇಲ್ಲದೇ ಹೋದರೆ ಅವರು ತಾಲ್ಲೂಕು ಮಟ್ಟದ ವ್ಯವಸ್ಥೆ ಅಥವಾ ಜಿಲ್ಲಾ ಮಟ್ಟದ ವ್ಯವಸ್ಥೆಗೆ ಸಹಾಯ ಮಾಡಬಾರದು ಎಂದು ಏನಿಲ್ಲ. ಅದಕ್ಕೋಸ್ಕರ ಇದು ಕೂಡ ಡೀಸೆಂಟ್ರ ಲೈಜ್ ಆಗಬೇಕು. ಅದನ್ನು ಡೀಸೆಂಟ್ರಲೈಜ್ ಮಾಡುವಾಗ there is nothing that prevents the taluk and zilla administration in helping them. ಇದರ ಬಗ್ಗೆ ನಾವು ಸರ್ಕ್ಯುಲರ್ ಅನ್ನು ಕಳುಹಿಸಿದ್ದೇವೆ. ಯಾರಾದರೂ ನಮ್ಮ ಜವಾಬ್ದಾರಿ ಇಲ್ಲವೆಂದು ಹೇಳಿದರೆ ಮಾನ್ಯ ಸದಸ್ಯರುಗಳು ನಮಗೆ ತಿಳಿಸಬಹುದು. ಆ ಸರ್ಕ್ಯುಲರ್ ಕಾಪಿ ಬೇಕಾದರೆ ಎಲ್ಲರಿಗೂ ಕೊಡುತ್ತೇನೆ. ಆ ಸರ್ಕ್ಯುಲರ್ ಬಗ್ಗೆ ಹೇಳುವುದಾದರೆ ಎಲ್ಲೆಲ್ಲಿ ಗ್ರಾಮ ಮಟ್ಟದಲ್ಲಿ ರೀಪೇರಿ ಮಾಡುವುದಕ್ಕೆ ಶಕ್ತಿ ಸಾಮರ್ಥ್ಯ ಇಲ್ಲ ಅಂತಹ ಕಡೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಿಂದ ಸಹಾಯ ಪಡೆಯಲೇಬೇಕು.

12.50 ಪಿ.ಎಂ.

ಜಿಲ್ಲಾ ಅಧಿಕಾರಸ್ಥರು ಅವರಿಗೆ ಸಹಾಯ ಮಾಡಲೇಬೇಕೆಂದು ಸರ್ಕ್ಯುಲರ್ ಅನ್ನು ಕಳುಹಿಸಿದ್ದೇವೆ. ಅದರ ಪ್ರತಿಗಳನ್ನು ಎಲ್ಲರಿಗೂ ಕಳುಹಿಸಿಕೊಡುತ್ತೇವೆ. ಅದರ ಬಗ್ಗೆ ತಾವು ಕೂಡ ಅಧಿಕಾರಸ್ಥರ ಮೇಲೆ

ಸಾಕಷ್ಟು ನಿಯಂತ್ರಣವನ್ನು ಇಟ್ಟುಕೊಳ್ಳಬೇಕಾಗುತ್ತದೆ, ನೀವು ಅವರಿಗೆ ಹೇಳಬೇಕಾಗುದೆ. ಸರ್ಕಾರದ ಉದ್ದೇಶ ಹೀಗಿದೆ, ನೀವು ಅವರಿಗೆ ಸಹಾಯ ಮಾಡಿ ಎಂದು ಹೇಳಬೇಕಾಗುತ್ತದೆ. ಈಗ ಬೇಸಿಗೆ, ಬಿಸಿಲು ಜಾಸ್ತಿ ಇರುವುದರಿಂದ ಬಹಳಷ್ಟು ಆದ್ಯತೆಯನ್ನು ಕೊಟ್ಟು ಈ ಒಂದು ತಿಂಗಳೊಳಗೆ ಪ್ರತಿಯೊಂ ದು ವಾಟರ್‌ಸೋರ್ಸ್‌ಗಳನ್ನು ಇನ್‌ಸ್ಪೆಕ್ಟ್ ಮಾಡಿ ಅಲ್ಲಿ ಏನೇನು ಮಾಡಬೇಕೆಂದು ಈಗಾ ಗಲೇ ಕರ್ನಾ ಟಕ ರಾಜ್ಯದಲ್ಲಿ ಆದೇಶವನ್ನು ಕೊಟ್ಟಿದ್ದೇವೆ. ಅದರ ಪ್ರಕಾರ ಅಧಿಕಾರಸ್ಥರು ನಡೆದುಕೊಳ್ಳುತ್ತಾರೋ, ಇಲ್ಲವೋ, ಎಂಬುದನ್ನು ನೋಡಿಕೊಳ್ಳುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಈ ಬೋರ್‌ವೆಲ್‌ಗಳನ್ನು ಕೊರೆಸುವಂಥಾದ್ದಕ್ಕೆ ಏಜೆನ್ಸಿಗಳನ್ನು ಫಿಕ್ಸ್ ಮಾಡುತ್ತಾರೆ. ಕಳೆದ ಮಾರ್ಚ್ ತಿಂಗಳಲ್ಲಿ ವಾಟರ್ ಸ್ಕೇರ್‌ಸಿಟಿ ಎಂದು ಮಾಡಿ ಬೋರ್‌ವೆಲ್‌ಗಳನ್ನು ಮಂಜೂರು ಮಾಡಿದಂಥಾದ್ದು ಇವತ್ತಿನವರೆಗೂ ತೆಗೆದಿಲ್ಲ. ಇವರು ಬೋರ್‌ವೆಲ್‌ಗಳನ್ನು ತೆಗೆಯುವು ದಕ್ಕೆ ಆಗುತ್ತಾ ಇಲ್ಲ, ಏಕೆಂದರೆ ಇವರು ಏಜೆನ್ಸಿ ಎಂದು ಏನು ಫಿಕ್ಸ್ ಮಾಡುತ್ತಾರೆ, ಆ ನಾರ್ಮ್ಸ್ ಏನು ಇದೆ, ಅದನ್ನು ಯಾರಿಗೋ ಒಬ್ಬರಿಗೆ ಕೊಟ್ಟು ಬಿಡುತ್ತಾರೆ. ಅದಕ್ಕೆ ನಾನು ಕೇಳುವಂಥಾದ್ದು ತಾವು ಅವರಿಗೆ ಕೊಟ್ಟು 8-9 ತಿಂಗಳುಗಳಾದರೂ ಅವರು ಬೋರ್‌ವೆಲ್‌ಗಳನ್ನು ಕೊರೆಯದಿದ್ದರೆ ಏನು ಪ್ರಯೋಜನ? ಅದಕ್ಕೆ ಅಯಾ ತಾಲ್ಲೂಕು ಮಟ್ಟದಲ್ಲಿ ಬೇಕಾದಷ್ಟು ಪ್ರೈವೇಟ್ ಜನರು ಇದ್ದಾರೆ. ಇವತ್ತು ಯಾವುದೋ ಒಂದು ಪಂಚಾಯತ್‌ಗೆ ನಾಲ್ಕು ಬೋರ್‌ವೆಲ್‌ಗಳು ಮಂಜೂರು ಅಯಿತೆಂದರೆ ಅದರ ಜವಾಬ್ದಾರಿಯನ್ನು ಪಂಚಾಯತ್‌ನವರಿಗೆ ಕೊಟ್ಟರೆ ಅವರೇ ಬೋರ್‌ವೆಲ್‌ಗಳನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಹಾಸನ ಜಿಲ್ಲೆಯಲ್ಲೂ 3-4 ಜನರು ಇದ್ದಾರೆ. ಅವರಿಗೆ ಎರಡು ಬೋರ್‌ವೆಲ್ ತೆಗೆಯುವುದಕ್ಕಾಗುವುದಿಲ್ಲ. ಅದುದರಿಂದ ಬೋರ್‌ವೆಲ್‌ಗ ಳನ್ನು ಕೊರೆಯುವಂಥಾದ್ದಕ್ಕೆ ಏಜೆನ್ಸಿಗಳನ್ನು ಫಿಕ್ಸ್ ಮಾಡುವಾಗ ನಾರ್ಮ್ಸ್ ಏನಿದೆ ಅದರ ಪ್ರಕಾರ ಮಾಡಬೇಕು, ಇಲ್ಲದಿದ್ದರೆ ಅದನ್ನು ಪಂಚಾಯತ್‌ನವರ ಜವಾಬ್ದಾರಿಗೆ ಕೊಟ್ಟರೆ ಸರಿಯಾಗುತ್ತದೆ. ಈ ಎರಡು ಕೆಲಸವಾಗದೇ ಹತ್ತು ತಿಂಗಳಾದರೂ ಒಂದು ಬೋರ್‌ವೆಲ್ ತೆಗೆಯಲಿಲ್ಲವೆಂದರೆ ನೀವು ಅವರಿಗೆ ಕೊಟ್ಟು ಏನು ಪ್ರಯೋಜನವಾಗುತ್ತದೆ?

ಶ್ರೀ ಕೆ. ಗೋಪಾಲ ಪೂಜಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಬಹಳಷ್ಟು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇವತ್ತು ಪಂಚಾಯತ್ ವ್ಯಾಪ್ತಿಯಲ್ಲಿ 15 ಸಾವಿರ, 20 ಸಾವಿರ ಜನಸಂಖ್ಯೆ ಇರುವ ಒಂದು ಪಂಚಾಯತ್‌ನಲ್ಲಿ ಎಫ್‌ಡಿಸಿ ಗ್ರೇಡ್‌ನ ಕಾರ್ಯದರ್ಶಿ ಯವರುಅಲ್ಲಿರಬೇಕಾಗಿತ್ತು. ಆದರೆ ಅಲ್ಲಿ ಎಸ್. ಡಿ. ಸಿ. ಗ್ರೇಡ್‌ನ ಗುಮಾಸ್ಥರು ವಾರಕ್ಕೆ ಎರಡು ದಿವಸ ಮಾತ್ರ ಬಂದು ಪಂಚಾಯತ್ ವ್ಯಾಪ್ತಿಯಲ್ಲಿ ಜನರು ಕಾದು ಕುಳಿತು ಅಲ್ಲಿ ಕೆಲಸವಾಗದೇ ಇರುವಂತಹ ಪರಿಸ್ಥಿತಿ ಇವತ್ತು ಇದೆ. ಈ ದೃಷ್ಟಿಯಿಂದ ಒಬ್ಬೊಬ್ಬ ಕಾರ್ಯದರ್ಶಿ ಯವರಿಗೆ 3-4 ಪಂಚಾಯತ್‌ಗಳ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಈ ರೀತಿಯ ವ್ಯವಸ್ಥೆಯಿಂದ ಗ್ರಾಮೀಣ ಪ್ರದೇಶದ ಜನರಿಗೆ ಬಹಳಷ್ಟು ಕಷ್ಟಗಳು ಉದ್ಭವವಾಗುತ್ತವೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ಕೈಗೊಳ್ಳುತ್ತಾರೆ ಎನ್ನುವುದನ್ನು ಮಾನ್ಯ ಅಧ್ಯಕ್ಷರ ಮುಖೇನ ಕೇಳುತ್ತೇನೆ.

ಅಧ್ಯಕ್ಷರು : ನಾನು ಈಗ ಬೇಡಿಕೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"31.3.2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ : 46ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾ ಅನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡವಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ :46- ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2001ರಂದುಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್'' ಇಲಾಖೆಯ ಸೇವೆಗಳಿಗೆ ಸಂದಾಯ. ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,076,84,50,000 ರೂಪಾಯಿಗಳಿಂದ ಮೀರದ ಮೊತ್ತವನ್ನು (ಲೇನುಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''.

ಬೇಡಿಕೆ ಸಂಖ್ಯೆ. 1
ಕೃಷಿ (ಬಯಲು ಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ)
ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ವಿರೋಧಪಕ್ಷ ದಲ್ಲಿ ಕುಳಿತಿರುವಂತಹ ಅನೇಕ ಸದಸ್ಯರು ಬೇಡಿಕೆಗಳ ಬಗ್ಗೆ ಮಾತನಾಡುವಂತಹ ಸಂಗರ್ಭದಲ್ಲಿ ಅನೇಕ ರೀತಿಯ ಅಮೂಲ್ಯವಾದಂತಹ ಸಲಹೆಗ ಳನ್ನು ಕೊಟ್ಟಿದ್ದಾರೆ. ಅವರು ಇವತ್ತು ಈ ಸದನದಲ್ಲಿ ಇರಬೇಕಾಗಿತ್ತು. ಅವರು ಚರ್ಚೆಯಲ್ಲಿ ಭಾಗವಹಿಸಿ ದ್ದರೆ ಚೆನ್ನಾಗಿ ಇರುತ್ತಿತ್ತು ಎನ್ನುವ ಮಾತನ್ನು ಹೇಳುತ್ತೇನೆ. ನಾನು ನನ್ನ ಇಲಾಖೆಗೆ ಸಂಬಂಧ ಪಟ್ಟಂತೆ ಸಂಕ್ಷಿಪ್ತವಾಗಿ ಬೇಡಿಕೆಯನ್ನು ಒಪ್ಪಿಕೊಳ್ಳುವುದ ಕ್ಕೋಸ್ಕರ, ಮಾನ್ಯ ಸದಸ್ಯರುಗಳು ಒಪ್ಪಿಗೆಯನ್ನು ಪಡೆದು ಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇನೆ, ಈ ರಾಷ್ಟ್ರದಲ್ಲೇ ಕರ್ನಾಟಕ ರಾಜ್ಯ 8ನೇ ದೊಡ್ಡ ರಾಜ್ಯವಾ ಗಿದೆ. ಸುಮಾರು 190 ಲಕ್ಷ ಹೆಕ್ಟೇರ್ ಭೂಮಿಯನ್ನು ಹೊಂದಿದೆ, 107 ಲಕ್ಷ ಹೆಕ್ಟೇರ್ ನಿವ್ವಳ ಭೂಮಿ ಸಾಗುವಳಿಗೆ ಯೋಗ್ಯವಾದಂತಹ ಪ್ರದೇಶವಾಗಿದೆ. ಅದರಲ್ಲಿ ಶೇಕಡ 24 ರಷ್ಟು ನೀರಾವರಿ ಪ್ರದೇಶವಾ ಗಿದ್ದು, ಇನ್ನು ಉಳಿದ ಶೇಕಡ 76 ರಷ್ಟು ಪ್ರದೇಶ ಮಳೆಯನ್ನಾಧರಿಸಿದೆ. ಈ ರಾಜ್ಯದಲ್ಲಿ ಒಂದು ವೈವಿಧ್ಯತೆ ಉಂಟು, ಬಹುಶಃ ಈ ಪ್ರಪಂಚದಲ್ಲಿ ಎಲ್ಲೂ ಇರದಂಥ ಉಷ್ಣ, ಅತಿ ಉಷ್ಣ, ಸಮಶೀತೋಷ್ಣ, ಇವೆಲ್ಲ ವೂ ಒಟ್ಟಿಗೆ ಸೇರಿದಂತಹ 10 ವಿಭಾಗಗಳಾಗಿ Agro Clamatic Zone" ಎಂದು ವಿಂಗಡನೆ ಮಾಡುವಂಥಾದ್ದು ಇದೆ, ಮತ್ತು ವಿಶೇಷವಾಗಿ ನಾವು ಬೆಳೆಯನ್ನು ಬೆಳೆಯುವಂಥಾದ್ದಕ್ಕೆ ಒಳ್ಳೆಯ ದೈವತ್ವವಾದಂತಹ ವಾತಾವರಣವೂ ಇದೆ. ನಮ್ಮ ರಾಜ್ಯದ ಜನಸಂಖ್ಯೆಯ ಪ್ರಮಾಣವನ್ನು ನಾವು ಲೆಕ್ಕ ಹಾಕಿಕೊಂಡಾಗ ಈಗಾಗಲೇ ಸುಮಾ ರು ಐದು ಕೋಟಿ ಅರವತ್ತು ಲಕ್ಷಕ್ಕೂ ಮೀರುವಂತಹ ಜನ ಸಂಖ್ಯೆ ಇವತ್ತು ಇದೆ. ನಾವು 1980 ದಶಕದಲ್ಲಿ ಜೆಡಿಪಿಯಲ್ಲಿ ಶೇಕಡ 4.4ರಷ್ಟು ಸಾಧನೆಯನ್ನು ಮಾಡಿದ್ದು, 1995ರ ನಂತರ ಅದು 4.6ಕ್ಕೆ ಹೆಚ್ಚಿಸು ವಂತಹ ಮಟ್ಟಕ್ಕೆ ಹೋಗಿದೆ. ನಾವು ಮುಖ್ಯವಾಗಿ ಆಹಾರ ಉತ್ಪಾದನೆಯಲ್ಲಿ 1956ರಿಂದ ಇಲ್ಲಿಯವರೆಗೆ ತೆಗೆದುಕೊಂಡರೆ 1999-2000ದಲ್ಲಿ